ತುಳು ರಂಗಭೂಮಿ ಮತ್ತು ಸಿನೆಮಾ: ಪ್ರೇರಣೆ ಮತ್ತು ಅನನ್ಯತೆ

(ಪಿಹೆಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧದ ಅಂತಿಮ ಸಾರಲೇಖ)

ಸಂಶೋಧಕರು

ಕೇಶವ ಬಂಗೇರ ಬಿ

ಮಾರ್ಗದರ್ಶಕರು

ಡಾ. ಧನಂಜಯ

ಸಹಾಯಕ ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ–೫೭೪೧೧೯

೨೦೨೬

ತುಳು ರಂಗಭೂಮಿ ಮತ್ತು ಸಿನೆಮಾ: ಪ್ರೇರಣೆ ಮತ್ತು ಅನನ್ಯತೆ

ಪರಿವಿಡಿ

ಅಧ್ಯಾಯ : ಒಂದು

೧.೧ ಅಧ್ಯಯನದ ಉದ್ದೇಶ

೧.೨ ಅಧ್ಯಯನದ ವ್ಯಾಪ್ತಿ

೧.೩ ಅಧ್ಯಯನದ ವೈಧಾನಿಕತೆ

೧.೪ ಅಧ್ಯಯನದ ಸ್ವರೂಪ

೧.೫ ಇದುವರೆಗೆ ನಡೆದಿರುವ ಅಧ್ಯಯನಗಳ ಸಾಹಿತ್ಯ ಸಮೀಕ್ಷೆ

ಅಧ್ಯಾಯ : ಎರಡು

ತುಳು ನಾಟಕ ಪರಂಪರೆ

೨.೧ ತುಳು ಜನಪದ ರಂಗಭೂಮಿ; ಧಾರ್ಮಿಕ ರಂಗಭೂಮಿ

೨.೨ ಕರಾವಳಿ ಯಕ್ಷಗಾನ ಮತ್ತು ತುಳು ರಂಗಭೂಮಿಯ ಸಾಮ್ಯತೆಗಳು

೨.೩ ತುಳು ನಾಟಕದ ಹುಟ್ಟು ಮತ್ತು ಪ್ರಾಚೀನತೆ

೨.೪ ವಸಾಹತುಪೂರ್ವ ತುಳು ರಂಗಭೂಮಿ

೨.೫ ವಸಾಹತೋತ್ತರ ತುಳು ರಂಗಭೂಮಿ

೨.೬ ಆಧುನಿಕ ತುಳು ರಂಗಭೂಮಿ

೨.೭ ತುಳು ರಂಗಭೂಮಿಗೆ ಹಾಸ್ಯ ನಾಟಕಗಳ ಹೊಸ ಆಯಾಮ

೨.೮ ತುಳು ರಂಗಭೂಮಿ; ಕಲಾಪೋಷಕರು

ಅಧ್ಯಾಯ : ಮೂರು

ತುಳು ಸಿನೆಮಾರಂಗ: ಆರಂಭದ ಹೆಜ್ಜೆ ಗುರುತು

೩.೧ ಕರ್ನಾಟಕದಲ್ಲಿ ಸಿನೆಮಾರಂಗದ ಆರಂಭ

೩.೨ ತುಳು ಸಿನೆಮಾರಂಗ: ಆರಂಭದ ಘಟ್ಟ

೩.೩ ತುಳು ಸಿನೆಮಾರಂಗ: ಪ್ರಭಾವ ಮತ್ತು ಪ್ರೇರಣೆ

೩.೪ ತುಳುನಾಡಿನಲ್ಲಿ ಚಲನಚಿತ್ರ ಮಂದಿರಗಳು

ಅಧ್ಯಾಯ : ನಾಲ್ಕು

ತುಳು ನಾಟಕ ಆಧಾರಿತ ಸಿನೆಮಾ: ಪ್ರೇರಣೆ ಮತ್ತು ಅನನ್ಯತೆ

೪.೧ ತುಳು ನಾಟಕಾಧಾರಿತ ಸಿನೆಮಾಗಳ ಕಥಾ ಸನ್ನಿವೇಶ

ಅಧ್ಯಾಯ : ಐದು

ತುಳು ನಾಟಕ ಮತ್ತು ಸಿನೆಮಾಗಳು: ಸಾಮಾಜಿಕ ಹಾಗೂ ಐತಿಹಾಸಿಕ ಕಥನಗಳ ಪ್ರೇರಣೆ ಮತ್ತು ಅನನ್ಯತೆ

೫.೧ ಸಾಮಾಜಿಕ ಕಥನಗಳ ಪ್ರೇರಣೆ ಮತ್ತು ಅನನ್ಯತೆ

೫.೨ ಪ್ರಾದೇಶಿಕ ವಸ್ತು ಪ್ರತಿಪಾದನೆ

೫.೩ ಸಾಮಾಜಿಕ ನಾಟಕ ಮತ್ತು ಸಿನೆಮಾಗಳು: ವಿಡಂಬನೆಯ ನೆಲೆ

೫.೪ ಐತಿಹಾಸಿಕ ಕಥನಗಳ ಪ್ರೇರಣೆ ಮತ್ತು ಅನನ್ಯತೆ

೫.೫ ತುಳು ನಾಟಕ; ಸಿನೆಮಾ: ಸಾಂಸ್ಕೃತಿಕ ಅನನ್ಯತೆ

೫.೬ ರಂಗಕಲೆಗಳಲ್ಲಿ ಆರಾಧನಾ ಪರಂಪರೆ

ಅಧ್ಯಾಯ : ಆರು

ತುಳು ನಾಟಕ ಮತ್ತು ಸಿನೆಮಾಗಳು: ಸಾಹಿತ್ಯ, ಸಂಗೀತ, ಭಾಷಿಕ ಅನನ್ಯತೆ

೬.೧ ತುಳು ನಾಟಕ ಮತ್ತು ಸಿನೆಮಾಗಳಲ್ಲಿ ಸಾಹಿತ್ಯ

೬.೨ ತುಳು ಭಾಷೆಯ ನಾಟಕ ಮತ್ತು ಸಿನೆಮಾಗಳಲ್ಲಿ ಗೀತ ಸಾಹಿತ್ಯ

೬.೩ ತುಳು ಭಾಷೆಯ ನಾಟಕ ಮತ್ತು ಸಿನೆಮಾಗಳ ಭಾಷಿಕ ಸ್ವರೂಪ

೬.೩.೧ ತುಳು ಭಾಷೆಯ ನಾಟಕಗಳ ಸ್ವರೂಪ

೬.೩.೨ ತುಳು ಭಾಷೆಯ ನಾಟಕಗಳಲ್ಲಿ ವಿಡಂಬನೆ

೬.೪ ತುಳು ಸಿನೆಮಾಗಳ ಸ್ವರೂಪ

೬.೪.೧ ತುಳು ಸಿನೆಮಾಗಳಲ್ಲಿ ಬಳಕೆಯಾದ ಗಾದೆ ಮಾತುಗಳು

ಅಧ್ಯಾಯ: ಏಳು

ಸಮಾರೋಪ

ಅಧ್ಯಯನದ ಫಲಿತಗಳು

ಅನುಬಂಧ

ಪ್ರಧಾನ ಆಕರ

ಪರಾಮರ್ಶನ ಗ್ರಂಥಗಳು

ಸಾಂಸ್ಕೃತಿಕ ಪದಕೋಶ

ಸಂದರ್ಶನ

ಛಾಯಾ ಚಿತ್ರಗಳು

ತುಳು ರಂಗಭೂಮಿ ಮತ್ತು ಸಿನೆಮಾ: ಪ್ರೇರಣೆ ಮತ್ತು ಅನನ್ಯತೆ

ಅನುಕರಣೆ ಮಾನವನ ಮೂಲಭೂತ ಸ್ವಭಾವ. ಆದಿಮ ನಾಗರಿಕತೆಯ ಆರಂಭದ ಕಾಲಘಟ್ಟದಲ್ಲಿ ಮನುಷ್ಯ ತನ್ನ ಬೇಕು ಬೇಡಗಳನ್ನು ಗಳಿಸಿಕೊಂಡದ್ದು ಅನುಕರಣೆಯ ಮೂಲಕ. ಅದಕ್ಕೆ ಪೂರಕವಾಗಿ ಅನಾದಿ ಕಾಲದಿಂದಲೂ ಮನುಷ್ಯನು ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಬಳಸಿಕೊಂಡಿರುವ ಸಾಧನ ಕುಣಿತ ಹಾಗು ಹಾಡು. ಪ್ರಾಥಮಿಕವಾಗಿ ಈ ಕುಣಿತ ಹಾಗೂ ಹಾಡುಗಳೇ ಜಗತ್ತಿನ ಅತ್ಯಂತ ಪ್ರಾಚೀನ ಕಲೆಗಳಲ್ಲಿ ಒಂದಾದ ನಾಟಕದ ಉಗಮಕ್ಕೆ ಪ್ರೇರಣೆ ಕೊಟ್ಟ ಅಂಶಗಳಾಗಿವೆ.

ಮಾನವನ ಮೂಲಭೂತ ಸ್ವಭಾವ ಆಗಿರುವ ಅನುಕರಣೆ ಮತ್ತು ಅದರ ಮುಂದುವರಿದ ರೂಪವಾದ ಕುಣಿತ ಮತ್ತು ಹಾಡುಗಳಿಗೆ ಸಂಭಾಷಣೆಯ ಆಯಾಮ ದೊರೆತು ನಾಟಕ ಪ್ರಕಾರ ಬೆಳೆದು ಬಂತು ಎನ್ನುವುದು ಬಹುತೇಕ ಎಲ್ಲಾ ವಿದ್ವಾಂಸರ ಅಭಿಪ್ರಾಯ.

ಜಗತ್ತಿನ ಪ್ರತಿಯೊಂದು ಸಂಸ್ಕೃತಿಗೂ ಅದರದ್ದೇ ಆದ ವೈಶಿಷ್ಟ್ಯ ಇರುವುದು ಹೌದಾದರೂ ಬಹುಪಾಲು ಎಲ್ಲಾ ಸಂಸ್ಕೃತಿಗಳಲ್ಲಿಯೂ ನಾಟಕದ ಹುಟ್ಟಿಗೆ ಕಾರಣವಾಗಿರುವ ಸಂದರ್ಭಗಳು ಬಹುತೇಕ ಏಕ ರೀತಿಯಲ್ಲಿದೆ. ಇದಕ್ಕೆ ಪೂರಕವೆಂಬಂತೆ ಮರುಳಸಿದ್ದಪ್ಪ ಅವರು "ತನ್ನ ಸುತ್ತಣ ನಿಸರ್ಗವನ್ನು ನಿಯಂತ್ರಿಸುವ ಮೂಲಕ ತನ್ನ ಉಳಿವನ್ನು ಭದ್ರಪಡಿಸಿಕೊಳ್ಳಲು ಮನುಷ್ಯ ಹೂಡಿದ ಸಂಚಿತವೇ ಧರ್ಮವೆನ್ನಬಹುದು. ವ್ಯಕ್ತಿ ಜಗತ್ತನ್ನು ನಿಯಂತ್ರಿಸಲು ಅವ್ಯಕ್ತ ಅತಿಮಾನುಷ ಪ್ರಪಂಚವೊಂದಿದೆಯೆಂದು ಮನುಷ್ಯ ಕಲ್ಪಿಸಿದ ಈ ಅತಿಮಾನುಷ ಸತ್ವಗಳನ್ನು ಒಲಿಸಲು, ಒತ್ತಾಯಿಸಲು ಹಲವು ತಂತ್ರಗಳನ್ನು ವಿಧಿವಿಧಾನಗಳನ್ನು ಕಂಡುಹಿಡಿದ. ಇದರಿಂದಾಗಿ ಹಾಡು ಕುಣಿತಗಳು ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಧಾರ್ಮಿಕ ವ್ರತಾಚರಣೆಗಳ ಅಂಗವಾಗಿ ಬಳಕೆಗೆ ಬಂದವು. ಪೌರಾಣಿಕ ಮಹಾಕಾವ್ಯಗಳು ರೂಪು ಹೊಂದಿದ್ದು ಧರ್ಮದ ಪ್ರೇರಣೆಯಿಂದ. ನಾಟಕಗಳು ಪ್ರಾಚೀನ ಸಾಹಿತ್ಯ ವೃಕ್ಷದ ರುಚಿಕಟ್ಟಾದ ಫಲಗಳು. ಈಗಾಗಲೇ ಸ್ಪಷ್ಟರೂಪು ತಾಳಿ ಸದೃಢವಾಗಿದ್ದ ನೃತ್ಯ, ಸಂಗೀತ, ಪುರಾಣ ಮಹಾಕಾವ್ಯ ಎಲ್ಲವನ್ನೂ ಬಳಸಿಕೊಂಡು ನಾಟಕ ಸಂಕೀರ್ಣವಾದ ಕಲೆಯಾಗಿ ಬೆಳೆಯಿತು. ಒಟ್ಟಾರೆ ಹೇಳುವುದಾದರೆ ಯಾವುದೇ ದೇಶದ ರಂಗಭೂಮಿ

ಅಲ್ಲಿನ ಧಾರ್ಮಿಕ ಅಂಗವಾಗಿ ಹುಟ್ಟಿ ಸಾಮಾಜಿಕವಾಗಿ ಬೆಳೆದಿದೆಯೆಂಬುವುದು ಸ್ಪಷ್ಟ ವಿಚಾರ" ಎಂದಿದ್ದಾರೆ.(ಆಧುನಿಕ ಕನ್ನಡ ನಾಟಕ; ೨೦೦೨; ಪು. ೪)

ನಾಟಕ ಪ್ರದರ್ಶನ ಒಂದು ರಂಗಕಲೆ. ಕಥೆ, ಪಾತ್ರ, ಸನ್ನಿವೇಶಗಳಿಂದ ಪ್ರೇಕ್ಷಕನಿಗೆ ಆನಂದವನ್ನೀಯುವುದು ನಾಟಕದಿಂದ ಮಾತ್ರ ಸಾಧ್ಯ. 'ಕಾವ್ಯೇಷು ನಾಟಕಂ ರಮ್ಯಂ' ಎಂದು ವೈಯಾಕರಣಿಗಳು ನಾಟಕದ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾ. ಮಾ. ನಾಯಕ ಅವರು ಜಾನ್ ಡಿಟ್ರಜ್ ಎಂಬ ರಂಗತಜ್ಞ ಲೇಖಕನ "ನಾಟಕ ಒಂದು ಕಥೆ; ಅದು ಸಂಭಾಷಣೆಯ ರೂಪದಲ್ಲಿರುತ್ತದೆ; ಮಾನವನ ಒಳತೋಟಿಗೆ ಸಂಬಂಧಿಸಿರುತ್ತದೆ; ಮಾತು ಮತ್ತು ಅಭಿನಯಗಳಲ್ಲಿ ಹೊರಹೊಮ್ಮುತ್ತದೆ; ರಂಗದ ಮೇಲೆ ನಡೆಯುತ್ತದೆ; ಪ್ರೇಕ್ಷಕರನ್ನು ಉದ್ದೇಶಿಸಿರುತ್ತದೆ. ಇದೆಲ್ಲವೂ ಸಮರ್ಥವಾಗಿ. ಸಮರ್ಪಕವಾಗಿ ನಡೆಯಬೇಕಾದರೆ ಒಂದು ಮಾರ್ಗದರ್ಶನ ಅಗತ್ಯವಾಗಿರುತ್ತದೆ. ಈ ಮಾರ್ಗದರ್ಶನ ನೀಡುವವನೇ ನಿರ್ದೇಶಕನಾಗಿರುತ್ತಾನೆ. ಅವನು ತನ್ನ ಕೆಲಸದಲ್ಲಿ ಯಶಸ್ಸು ಪಡೆದಾಗಲೇ, ಒಂದು ನಾಟಕ ರಂಗದ ಮೇಲೆ ಯಶಸ್ಸು ಪಡೆಯಿತು ಎಂದು ಹೇಳಬಹುದು. ಹೀಗಾಗಿ ಈಗ ನಾಟಕ ಎನ್ನುವುದು ಸಂಪೂರ್ಣವಾಗಿ ನಿರ್ದೇಶಕನ ಕೃತಿಯೇ ಆಗಿದೆ" ಎಂಬ ಮಾತನ್ನು ಉಲ್ಲೇಖಿಸಿದ್ದಾರೆ.(ಕನ್ನಡ ರಂಗಭೂಮಿಯ ವಿಕಾಸ; ೧೯೯೦; ಪು. xii) ಈ ಮಾತು ಸಿನಿಮಾಕ್ಷೇತ್ರಕ್ಕೂ ಅನ್ವಯಿಸುವ ವಿಚಾರವಾಗಿದೆ.

ರಂಗಕಲೆಗಳಲ್ಲಿ ಸಾಹಿತ್ಯ, ಸಂಗೀತ, ನೃತ್ಯಗಳಿಂದ ಕೂಡಿರುವ ನಾಟಕ ಒಂದು ಸಂಕೀರ್ಣ ಕಲೆ. ಈ ಕಾರಣದಿಂದಾಗಿ ನಾಟಕ ಉಳಿದ ಕಲೆಗಳಿಂದ ಭಿನ್ನ ಹಾಗೂ ಹೆಚ್ಚು ಜನಾಕರ್ಷಣೆಯಿಂದ ಕೂಡಿದೆ. ವೈವಿಧ್ಯಮಯವಾದ ಮುಖವರ್ಣಿಕೆ, ಉಡುಗೆ ತೊಡುಗೆ, ರಂಗಸಜ್ಜಿಕೆ, ಸಂಭಾಷಣೆ, ಧ್ವನಿ, ಬೆಳಕು ಇತ್ಯಾದಿಗಳಿಂದ ನಾಟಕ ಇತರ ಕಲಾಪ್ರಕಾರಗಳಿಗಿಂತ ವ್ಯತ್ಯಾಸದಿಂದ ಕೂಡಿದೆ. ಈ ಕಾರಣದಿಂದಾಗಿ ನಾಟಕ ಹೆಚ್ಚು ಜನಪ್ರಿಯಗೊಳ್ಳುವುದಕ್ಕೆ ಸಾಧ್ಯವಾಗಿದೆ.

ಜಾಗತಿಕವಾಗಿ ವ್ಯಾಪಿಸಿರುವ ರಂಗಭೂಮಿ ಪ್ರದರ್ಶನಗಳ ಮೂಲ ಗ್ರೀಕ್ ದೇಶ ಎಂದು ಭಾವಿಸಲಾಗಿದೆ. ಸೋಪೋಕ್ಲೀಸ್, ಪ್ಲೇಟೋ, ಅರಿಸ್ಟಾಟಲ್ ಮುಂತಾದ ಸಾಹಿತ್ಯ ಮೀಮಾಂಸಕರ ತಾತ್ವಿಕತೆಗಳನ್ನು ಜಗತ್ತು ಇಂದು ಕೊಂಡಾಡುತ್ತಿದೆ. ಭಾರತೀಯ ರಂಗ ಕಲೆಗಳಿಗೆ ಭರತ ಮುನಿಯ ನಾಟ್ಯಶಾಸ್ತ್ರ ಗ್ರಂಥವೇ ಪ್ರಧಾನ ಆಕರ ಎಂಬ ವಿಚಾರವೂ ಪ್ರಚಲಿತದಲ್ಲಿದೆ.

ಜಗತ್ತಿನ ನಾಟಕ ಪರಂಪರೆಯಲ್ಲಿ ಪ್ರಾಚೀನ ಗ್ರೀಕ್ ರುದ್ರನಾಟಕಗಳು ಗ್ರೀಕರ ಧಾರ್ಮಿಕ ಆಚರಣೆಯ ಹಿನ್ನಲೆಯಲ್ಲಿ ಹುಟ್ಟಿದ್ದು ಎಂಬುವುದು ನಮಗೆ ವೇದ್ಯವಾದ ಸಂಗತಿ. ಪ್ರಾಚೀನ ಗ್ರೀಕ್‌ನ ಅಥೆನ್ಸ್‌ನಲ್ಲಿ ಗ್ರೀಕರ ಸತ್ಯದೇವತೆಯಾದ 'ಡಯಾನಿಸಿಸ್'ಗೆ ಪ್ರತಿವರ್ಷ ಎರಡು ಉತ್ಸವಗಳು ನಡೆಯುತ್ತಿದ್ದು ಅವುಗಳಲ್ಲೊಂದು ವಸಂತೋತ್ಸವ. ಈ ಸಂದರ್ಭದಲ್ಲಿ 'ಡಯಾನಿಸಿಸ್' ದೇವತೆಯ ಮಹಿಮೆ ಸಂಬಂಧಿಸಿದಂತೆ ಕೊಂಡಾಡುವ 'ಡಿತಿರ್ಯಾಂಬಸ್' ಮೇಳಗೀತೆಗಳನ್ನು ಹಾಡುತ್ತಿದ್ದರು. ಕುಣಿತ ಹಾಡುಗಳಿಂದ ಕೂಡಿದ ಈ ಜನಪದ ಮೇಳಗೀತೆಗಳು ಕ್ರಮೇಣ ಸಂವಾದದ ರೂಪಕ್ಕೆ ತಿರುಗಿ ಸುಮಾರು ಕ್ರಿ.ಸ್ತಪೂರ್ವ ೫ನೇ ಶತಮಾನದ ಹೊತ್ತಿಗೆ ರುದ್ರನಾಟಕವು ಜನ್ಮತಾಳಿತು.

ಸುಮಾರು ಹದಿನಾಲ್ಕನೇ ಶತಮಾನದವರೆಗೂ ಇಂಗ್ಲಿಷ್ ನಾಟಕ ಪ್ರಧಾನವಾಗಿ ಧಾರ್ಮಿಕ ಬದ್ಧತೆಗಳನ್ನೇ ಹೊಂದಿತ್ತು. ಕಾರಣ ಇಂಗ್ಲಿಷ್ ರಂಗಭೂಮಿಯ ಮೇಲೆ ಪ್ರಧಾನವಾಗಿ ಅಲ್ಲಿನ ಚರ್ಚ್‌ಗಳು ಹಿಡಿತ ಸಾಧಿಸಿದ್ದುವು. ಚೀನಾ ರಂಗಭೂಮಿಯು ಅಲ್ಲಿನ ಪ್ರಾಚೀನ ಧಾರ್ಮಿಕ ಆರಾಧನೆಯ ಅಂಗವಾಗಿ ಹುಟ್ಟಿತೆಂದು ಸಂಶೋಧನೆಗಳಿಂದ ವಿಧಿತವಾದ ಸಂಗತಿ.

ಹಾಗೇ ನೋಡಿದರೆ ಭಾರತದ ಪ್ರಾಚೀನ ರಂಗಭೂಮಿಗೆ ವೇದಗಳೇ ಪ್ರೇರಣೆ (ಋಗ್ವೇದದ ಸಂವಾದ ಸೂಕ್ತಗಳು) ಎಂಬುದನ್ನು ವಿದ್ವಾಂಸರು ಊಹಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಪ್ರಚಲಿತವಾಗಿದ್ದ ಪುರಾಣೇತಿಹಾಸಗಳಲ್ಲಿ ಕಥನಕಲೆಗಳಾಗಿ, ಪ್ರದರ್ಶನಕಲೆಗಳಾಗಿ ಸುಮಾರು ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ ಸಂಸ್ಕೃತ ನಾಟಕ ರೂಪ ತಾಳಿತು. ಈ ನೆಲೆಯಲ್ಲಿ ಕನ್ನಡ ರಂಗಭೂಮಿಯನ್ನು ನೋಡುವುದಾದರೆ ಪೌರಾಣಿಕ ಕಥಾವೃತ್ತಾಂತಗಳು ಹಬ್ಬ ಹರಿದಿನಗಳಲ್ಲಿ ಜಾತ್ರಾ ಉತ್ಸವಗಳಲ್ಲಿ ಕಥನ ಕಲೆಗಳಾಗಿ (ಕಂಸಾಳೆ, ಗೊಂದಲಿಗರ ಪ್ರಸಂಗಗಳು) ಇಂದಿಗೂ ನಮ್ಮ ಜನ ಏರ್ಪಡಿಸಿ, ಕೇಳಿ ಕೇಳಿಸಿ ಆರಾಧನೆಯಲ್ಲಿ ಭಾಗಿಯಾಗುತ್ತಾರೆ. ಇವು ಕೇವಲ ಕಥನ ಕಲೆಗಳಾಗಿರದೆ ಪ್ರದರ್ಶನ ಕಲೆಗಳಾಗಿಯೂ ವಿವಿಧ ರೂಪಾಂತರಗಳನ್ನು ಪಡೆದು ಪ್ರಾಚೀನ ರಂಗಭೂಮಿಗೆ ಪ್ರೇರಣೆ ನೀಡಿತು. ಇದೇ ಬಗೆಯ ಸಾಮ್ಯತೆಯನ್ನು ತುಳು ರಂಗಭೂಮಿಯ ಪರಂಪರೆಯಲ್ಲಿ ನಾವು ಅತ್ಯಂತ ಸ್ಪಷ್ಟವಾಗಿ ಗುರುತಿಸಬಹುದು.

ಭಾರತೀಯ ಕಾವ್ಯ ಮೀಮಾಂಸಕರು ನಾಟಕದ ಕುರಿತು 'ಲೋಕವೃತ್ತಾನುಕರಣ' ಎಂದಿದ್ದಾರೆ. ಅರಿಸ್ಟಾಟಲ್ "ನಾಟಕ ಎನ್ನುವುದು ಒಂದು ಕ್ರಿಯೆಯ ಅನುಕರಣ" ಎಂದಿದ್ದಾನೆ.(ಅದೇ; ಪು. Xi)

ರಂಗಭೂಮಿ ಕ್ಷಣಿಕ ಲಕ್ಷಣ ಹೊಂದಿರುವ ಒಂದು ಕಲಾಪ್ರಕಾರ. ನಾಟಕದ ಪಠ್ಯ ದೀರ್ಘಕಾಲಿಕವಾಗಿದ್ದರೂ ನಾಟಕ ಪ್ರದರ್ಶನ ಪ್ರತಿಬಾರಿಯೂ ಹೊಸತನವನ್ನು ಮೈಗೂಡಿಸಿಕೊಳ್ಳುತ್ತದೆ. ಸಂದರ್ಭಕ್ಕನುಗುಣವಾಗಿ ಜೀವಂತಿಕೆಯನ್ನು ಪ್ರದರ್ಶಿಸುವ ನಾಟಕ ಪ್ರೇಕ್ಷಕರ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರುತ್ತದೆ. ಜೀವನದ ನೈಜ ಘಟನೆಗಳ ಕಲಾತ್ಮಕ ಅಭಿವ್ಯಕ್ತಿ ರಂಗದಲ್ಲಿ ಪ್ರಸ್ತುತಿಗೊಂಡಾಗ ಪ್ರೇಕ್ಷಕನ ಮನಸ್ಸಿನಲ್ಲಿ ಧನ್ಯತೆಯ ಪರಿಪೂರ್ಣತೆ ಕಂಡುಬರುತ್ತದೆ.

ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ನಾಟಕಕಾರರು ಅದರ ಸಾಹಿತ್ಯವನ್ನು ರಚಿಸುವಲ್ಲಿ ಶ್ರಮಿಸುತ್ತಾರೆ. ಪ್ರೇಕ್ಷಕನ ಉದ್ವೇಗ, ನಿರೀಕ್ಷೆಗಳು, ಭಾವನೆಗಳಿಗೆ ಸ್ಪಂದಿಸುವ ಚಾಕಚಕ್ಯತೆ ನಾಟಕ ರಚನೆಕಾರನಲ್ಲಿದೆ. ನಾಟಕಗಳಲ್ಲಿ ಕಥೆಗೆ ಪ್ರಾಮುಖ್ಯತೆ ಇರುವುದರಿಂದ ಪ್ರದರ್ಶನಗೊಳ್ಳುವ ನಾಟಕಗಳ ಕಥೆಯ ಸ್ವರೂಪಗಳು ರಂಗ ಪ್ರದರ್ಶನದ ಸಂದರ್ಭಗಳಲ್ಲಿ ಕುತೂಹಲವನ್ನು ಕೆರಳಿಸುತ್ತಿತ್ತು. ರಂಗಪ್ರದರ್ಶನದ ಪ್ರತೀ ಅಂಕದ ಹಂತ ಹಂತಗಳಲ್ಲಿಯೂ ಕಥೆಯ ಬೆಳವಣಿಗೆಯನ್ನು ಪ್ರೇಕ್ಷಕರು ಕೌತುಕದಿಂದ ಕಾಯುತ್ತಿದ್ದರು. ಇದಕ್ಕೋಸ್ಕರ ನಾಟಕಕಾರ ರೋಚಕ ಘಟನೆಗಳನ್ನು ನಿರೀಕ್ಷಿತ ಸಮಯದಲ್ಲಿ ಬಹಿರಂಗ ಪಡಿಸದೇ ಪ್ರೇಕ್ಷಕರ ಉದ್ವೇಗವನ್ನು ಉಳಿಸಿಕೊಂಡು ನಾಟಕವನ್ನು ಮುಕ್ತಾಯದ ಹಂತಕ್ಕೆ ತರುತ್ತಾನೆ.

ನಾಟಕಗಳಲ್ಲಿ ಎರಡು ಬಗೆಯನ್ನು ಗುರುತಿಸಲಾಗಿದೆ. ದುರಂತ ನಾಟಕ ಹಾಗೂ ಹಾಸ್ಯ ನಾಟಕ. ಅತ್ಯಂತ ಪ್ರಭಾವಯುತವಾದ ಕಥಾ ಹಂದರವನ್ನು ಸೃಷ್ಟಿಸಿ, ಪ್ರೇಕ್ಷಕನಲ್ಲಿ ಭೀತಿ ಮತ್ತು ಕೌತುಕಗಳನ್ನು ತರಬಲ್ಲ ಸಾವು, ದುರಂತ, ಆಕ್ರಮಣ, ಯುದ್ಧ ಮರಣದಂಡನೆ ಮುಂತಾದ; ಕಲಾಭಿಮಾನಿಗಳಲ್ಲಿ ಮಾನವ ಸಹಜ ಸಂಕಟಗಳನ್ನು ಪ್ರಚೋದಿಸುವ, ಭಾವನೆಗಳನ್ನು ಉದ್ದೀಪನಗೊಳಿಸುವ ಸನ್ನಿವೇಶಗಳಿರುವ ನಾಟಕಗಳನ್ನು ದುರಂತ ನಾಟಕಗಳು ಎಂದು ಕರೆಯಲಾಗಿದೆ. ಹೆಚ್ಚಿನ ಇಂತಹ ನಾಟಕಗಳು ದುಃಖಾಂತ್ಯದಿಂದ ಕೂಡಿರುತ್ತವೆ. ಪಾಶ್ಚಾತ್ಯ ನಾಟಕಕಾರ ಷೇಕ್ಸ್‌ಪಿಯರ್‌ನ ಕೆಲವು ನಾಟಕಗಳು ಈ ಬಗೆಯಲ್ಲಿವೆ.

ಪ್ರೇಕ್ಷರನ್ನು ಹಾಸ್ಯದಲ್ಲಿ ರಂಜಿಸಿ ಅವರ ಮನಸ್ಸಿಗೆ ಮುದ ನೀಡಬಲ್ಲ ಸನ್ನಿವೇಶಗಳನ್ನು ಸೃಷ್ಟಿಸಿ, ವ್ಯಂಗ್ಯಭರಿತವಾದ ಮಾತುಗಳಿಂದ ಜನರನ್ನು ನಗಿಸಿ ಆ ಮೂಲಕ ಸಾಮಾಜಿಕ ಜಾಗೃತಿಗೊಳಿಸುವ ಅಥವಾ ನೈತಿಕ ವಿಚಾರಗಳನ್ನು ಜಾಗೃತಗೊಳಿಸುವ ನಾಟಕಗಳನ್ನು ಹಾಸ್ಯನಾಟಕಗಳು ಎನ್ನಲಾಗಿದೆ. ಸುಖಾಂತ್ಯದಿಂದ ಕೂಡಿದ ಇಂತಹ ನಾಟಕಗಳಲ್ಲಿ ಮೋಜು, ತಮಾಷೆಯ ಮಾತುಗಳು, ರೊಮ್ಯಾಂಟಿಕ್ ಸನ್ನಿವೇಶಗಳು, ಹಾಸ್ಯದಿಂದ ಕೂಡಿದ ನಡವಳಿಕೆ, ಭಾವನಾತ್ಮಕ ಲಾಸ್ಯ ಇತ್ಯಾದಿಗಳು ತುಂಬಿಕೊಂಡಿರುತ್ತವೆ.

ನಾಟಕಗಳಿಂದ ಪ್ರೇರಣೆ ಪಡೆದು ರೂಪುಗೊಳ್ಳುವ ಚಲನಚಿತ್ರಗಳಲ್ಲಿ ಲಿಖಿತ ಸಾಹಿತ್ಯಕ್ಕಿಂತ ಭಿನ್ನವಾದ ದೃಶ್ಯರೂಪಗಳು ಕಥೆಯನ್ನು ಕಟ್ಟಿಕೊಡುತ್ತವೆ. ಇಲ್ಲಿ ಓದುಗನ ಸ್ವಾತಂತ್ರ್ಯವು ಕಿರಿದಾಗಿ ಚಲನಚಿತ್ರದ ದೃಶ್ಯಗಳ ಮೂಲಕ ರಸಾನುಭವವನ್ನು ದಕ್ಕಿಸಿಕೊಳ್ಳುವ ಅನಿವಾರ್ಯತೆ ರಸಿಕನಿಗಿದೆ. ಸುಂಕಂ ಗೋವರ್ಧನ ಅವರು ಸಾಹಿತ್ಯ ಮತ್ತು ಚಲನಚಿತ್ರಗಳ ಕುರಿತಾಗಿ "ಸಾಹಿತ್ಯ ಕೃತಿಗಳನ್ನು ಯಥಾವತ್ತಾಗಿ ದೃಶ್ಯಲೋಕಕ್ಕೆ ರೂಪಾಂತರಿಸುವಾಗಲೂ ಈಗಾಗಲೇ ಓದುಗರ ಕಲ್ಪನೆಯಲ್ಲಿ ಒಡಮೂಡಿದ ಕಾಲ ದೇಶಗಳಿಗೆ ಪರ್ಯಾಯವಾದ ಚಿತ್ರಗಳೇ ಕೆಲಸ ಮಾಡುತ್ತಿತ್ತು. ಚಲನಚಿತ್ರ ನಿರ್ದೇಶಕರು ಬಹಳ ಎಚ್ಚರಿಕೆಯನ್ನು ವಹಿಸಿ ಓದುಗ ವಲಯದಲ್ಲಿ ಈಗಾಗಲೆ ಸ್ಥಾಪಿತವಾಗಿರಬಹುದಾದ ಆವರಣದಲ್ಲೇ ಕತೆಯನ್ನು ದೃಶ್ಯದಲ್ಲಿ ಕಟ್ಟುತ್ತಾ ಸಾಗುವ ಪ್ರಯತ್ನವನ್ನು ಜನಪ್ರಿಯ ಚಿತ್ರಗಳ ಮೂಲಕ ಮಾಡುತ್ತಾ ಸಾಗಿದರು" ಎಂದು ಉಲ್ಲೇಖಿಸಿದ್ದಾರೆ. (ಸಾಹಿತ್ಯದ ಅನುಭವ ವಿಸ್ತರಣೆ ಹಾಗೂ ಪರ್ಯಾಯ ಚಲನಚಿತ್ರಗಳು; ೨೦೨೧; ಪು. ೩೨)

ದ್ರಾವಿಡ ಭಾಷೆಗಳಲ್ಲಿ ಮಹತ್ವದ ಸ್ಥಾನ ಪಡೆದಿರುವ ತುಳು ಭಾಷೆಗೂ ಅತ್ಯಂತ ಪ್ರಾಚೀನ ವಾಕ್ ಪರಂಪರೆ ಮತ್ತು ಸಂಸ್ಕೃತಿಯಿದೆ. ತುಳುನಾಡಿನ ಜನಪದರಲ್ಲಿ ಪ್ರಚಲಿತವಿರುವ ನಾಗಾರಾಧನೆ, ಭೂತಾರಾಧನೆ, ಮೌಖಿಕ ಸಾಹಿತ್ಯ, ಸಂಗೀತ, ಹಾಡು, ಕುಣಿತ, ವಿನೋದ–ವಿಡಂಬನೆ, ವೇಷಭೂಷಣ, ಸಾಮಾಜಿಕ ನ್ಯಾಯ ಪದ್ಧತಿ, ಆರಾಧನೆ, ಸಂಪ್ರದಾಯಗಳು ಪರಂಪರೆಯಿಂದ ಬಂದ ಜೀವನ ಮೌಲ್ಯಗಳಾಗಿವೆ. ಇವುಗಳಲ್ಲಿ ಅಡಗಿರುವ ನಾಟಕಾಂಶಗಳನ್ನು ನಾವು ಗಮನಿಸಬಹುದಾಗಿದೆ. ಈ ವೈಚಾರಿಕ ಆಚರಣೆಗಳೊಂದಿಗೆ ಭಾಷೆಯ ಬೆಳವಣಿಗೆಯೂ ನಡೆದಿದೆ. ಭಾಷೆಯ ಮೂಲಕ ಸೃಷ್ಟಿಯಾಗುವ ಸಾಹಿತ್ಯ ಹೊಸ ಹೊಸ ಪ್ರಕಾರಗಳಿಗೆ

ಹೊಂದಿಕೊಳ್ಳುವುದನ್ನು ಗಮನಿಸಬಹುದಾಗಿದೆ. ತುಳು ಭಾಷೆಯಲ್ಲಿ ಸೃಷ್ಟಿಯಾಗಿರುವ ಸಾಹಿತ್ಯದ ಕುರಿತು ಮುದ್ದು ಮೂಡುಬೆಳ್ಳೆಯವರು "ತುಳು ಭಾಷೆಯಲ್ಲಿ ಅಪಾರವಾದ ಶಬ್ದಸಂಪತ್ತು, ಸುಂದರ ನುಡಿಕಟ್ಟುಗಳಿವೆ. ಹೀಗಿದ್ದರೂ ತುಳುಭಾಷೆಯಲ್ಲಿ ಶುದ್ಧ ನಾಟಕ ಪ್ರಕಾರವೆಂಬುದರ ಉದಯ ಸ್ವಲ್ಪ ವಿಳಂಬವಾಗಿಯೇ ಆಯಿತೆನ್ನಬಹುದು. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಇತಿಹಾಸ ವಿವಿಧ ಕಾಲಘಟ್ಟಗಳಲ್ಲಿ ತುಳುನಾಡು ವಿವಿಧ ಅಧೀನ ಸಂಸ್ಕೃತಿಗೆ ಒಳಗಾದುದು. ಭಾಷಾವಾರು ಪ್ರಾಂತ ರಚನೆಯ ಬಳಿಕ, ತುಳುನಾಡು ಕನ್ನಡ ನಾಡಿನ ಅಂಗವಾಯಿತು; ದಕ್ಷಿಣಕನ್ನಡ ಜಿಲ್ಲೆಯೆಂದಾಯಿತು. ತುಳುನಾಡಿನಲ್ಲಿ ರಾಜಭಾಷೆ ಆಗಿದ್ದದು ಕನ್ನಡ. ಓದು ಬರಹ ಬಲ್ಲವರಾಗಿ ಸಾಹಿತ್ಯ ರಚನೆ, ನಾಟಕ ರಚನೆಗೆ ತೊಡಗಿದವರೂ ಕನ್ನಡ ಮತ್ತಿತರ ಭಾಷೆಗಳಲ್ಲೇ ಬರೆದರು. ತುಳುವಿಗೆ ಲಿಪಿ(ಇದ್ದರೂ) ಇಲ್ಲವೆನ್ನುವ ಕಾರಣವೊಡ್ಡಿ ಈ ಭಾಷೆ ಅನ್ಯರಿಂದಲೂ ಸ್ವಭಾಷಿಕರಿಂದಲೂ ಅಲಕ್ಷ್ಯ ಅವಜ್ಞೆಗೀಡಾಗಿಯೇ ಸಾಗಿಬಂತು. ತುಳುವಿನ ಅನರ್ಘ್ಯ ಸಾಂಸ್ಕೃತಿಕ ನಿಕ್ಷೇಪ ಗುಪ್ತನಿಧಿಯಾಗಿಯೇ ಬಹುಕಾಲ ಉಳಿಯಿತು" ಎಂದು ಪ್ರಸ್ತಾಪಿಸಿದ್ದಾರೆ.(ತುಳು ರಂಗಭೂಮಿ; ೨೦೦೫; ಪು. ೭)

ಮಾಧವ ತಿಂಗಳಾಯರಿಗಿಂತ ಮೊದಲು ನಾಟಕ ಬರೆದವರು ಅವರ ಮಾವ ಹೆಚ್ ಕೃಷ್ಣಪ್ಪ ತಿಂಗಳಾಯರು. ಇವರು ೧೯೧೯ರಲ್ಲಿ ಸಂಘಟನೆಯ ಮೂಲಕ ನಾಟಕವನ್ನು ಜನಸಾಮಾನ್ಯರಲ್ಲಿಗೆ ತಲುಪಿಸುವ ಪ್ರಯತ್ನ ಮಾಡಿದರು. ಇವರ 'ಶ್ರೀ ಸತ್ಯಾರ್ಯೋತ್ತೇಜಕ ನಾಟಕ ಸಭಾ' ಎಂಬ ತಂಡವನ್ನು ಕಟ್ಟಿ ನಾಟಕ ಪ್ರದರ್ಶನ ನೀಡಿದರು. ಇವರ ಹೆಚ್ಚಿನ ನಾಟಕಗಳು ಸಮಾಜವನ್ನು ಜಾಗೃತಿಗೊಳಿಸಿ ಜನಸಾಮಾನ್ಯರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವ ಆಶಯಗಳನ್ನು ಒಳಗೊಂಡಿರುವಂತವುಗಳಾಗಿವೆ. ಇವರ 'ತುಳುವೆರೆ ಗತವೈಭವ', 'ತುಳುವೆರೆ ಅಭ್ಯುದಯ' ನಾಟಕಗಳು ತೌಳವ ಪರಂಪರೆಯ ಮೇಲಿನ ಅಭಿಮಾನದಿಂದ ಮೂಡಿಬಂದ ನಾಟಕಗಳಾಗಿವೆ. ಕೃಷ್ಣಪ್ಪ ತಿಂಗಳಾಯರು ಶಾಲಾ ಮಕ್ಕಳನ್ನು ಬಳಸಿಕೊಂಡು ರಂಗಪ್ರದರ್ಶನಗಳನ್ನು ನೀಡಿದ್ದು ಪರಂಪರೆಯ ಉಳಿವಿನ ಬಗೆಗಿದ್ದ ಕಾಳಜಿಯನ್ನು ಗಮನಿಸಬಹುದಾಗಿದೆ.

ಇಂಗ್ಲಿಷ್ ಭಾಷೆಯ 'ಸಿನಿಮಾಟೋಗ್ರಾಫ್' ಎನ್ನುವ ದೀರ್ಘ ಪದ ಸಂಕ್ಷಿಪ್ತವಾಗಿ 'ಸಿನಿಮಾ' ಅಥವಾ 'ಸಿನೆಮಾ' (ಮಹಾಪ್ರಬಂಧದಲ್ಲಿ ಈ ಎರಡೂ ಪದಗಳನ್ನು ಬಳಸಲಾಗಿದೆ.)ಎಂದಾಗಿದೆ. ಗ್ರೀಕ್ ಭಾಷೆಯ 'ಕೆನಿಮಾ' ಎಂಬ ಪದಕ್ಕೆ

ಚಲನೆ, ಸ್ಥಳಾಂತರ ಮುಂತಾದ ಅರ್ಥಗಳನ್ನು ಹೊಂದಿದೆ. ಇದಕ್ಕೆ ಅನುಗುಣವಾಗಿ ಆಂಗ್ಲ ಭಾಷೆಯಲ್ಲಿ 'ಮೂವಿ' ಎನ್ನುವ ಪರ್ಯಾಯ ಪದವು ಬಳಕೆಯಲ್ಲಿದೆ. ಪಾಶ್ಚಾತ್ಯ ಭಾಷೆಗಳಿಗೆ ಅನ್ವರ್ಥವಾಗಿ ಕನ್ನಡ ಭಾಷೆಯಲ್ಲಿ ಸಮಾನ ಅರ್ಥವನ್ನು ಸ್ಫುರಿಸುವ ಸಲುವಾಗಿ 'ಚಲನಚಿತ್ರ' ಎನ್ನುವ ಪದವನ್ನು ಬಳಸಲಾಗಿದೆ.

ತಂತ್ರಜ್ಞಾನದ ಸಹಾಯದಿಂದ ಚಲನೆಯ ಮೂಲಕ ಪರದೆಯ ಮೇಲೆ ಮೂಡುವ ವೈಜ್ಞಾನಿಕವಾಗಿ ಸೃಷ್ಟಿಗೊಂಡ ಫಿಲ್ಮಿನ ಛಾಯೆಯ ಒಂದು ಪ್ರತಿಫಲನವಾಗಿದೆ. ಯಂತ್ರೋಪಕರಣಗಳನ್ನು ಬಳಸಿ ಪ್ರೇಕ್ಷಕರ ಕಣ್ಣು ಮತ್ತು ಕಿವಿಗಳಿಗೆ ಏಕಕಾಲದಲ್ಲಿ ರಸಾಸ್ವಾದನೆಯನ್ನು ನೀಡುವ ಸಾಮರ್ಥ್ಯ ಚಲನಚಿತ್ರಕ್ಕಿದೆ. ಪ್ರೇಕ್ಷಕರ ಅಭಿರುಚಿಗೆ ಅನುಸಾರವಾಗಿ ನಿರ್ಮಾಪಕ ಮತ್ತು ನಿರ್ದೇಶಕರು ನಿರ್ದಿಷ್ಟ ಸರಣಿಯೊಂದನ್ನು ಆಯ್ದು ಚಿತ್ರೀಕರಿಸುತ್ತಾರೆ. ಈ ಸಂದರ್ಭ ಅವರು ಪ್ರೇಕ್ಷಕರ ಬಹುಜನರ ಆಸಕ್ತಿಗೆ ಅನುಗುಣವಾಗಿ ವೈವಿಧ್ಯಮಯವಾದ ಸಾಹಿತ್ಯ, ಸಂಗೀತ, ವೇಷಭೂಷಣ, ಪರಿಕರಗಳನ್ನು ಬಳಸಿಕೊಂಡು ರಸಾತ್ಮಕವಾದ ಚಿತ್ರವನ್ನು ತೆರೆಗೆ ಪರಿಚಯಿಸುತ್ತಾರೆ.

ಚಲನಚಿತ್ರ ಮಾಧ್ಯಮ ಪ್ರೇಕ್ಷಕರ ವಿಭಿನ್ನ ಆಸಕ್ತಿಗಳನ್ನು ಕತೆ, ಸಂಭಾಷಣೆ, ಹಾಡು, ನೃತ್ಯ ಸಂಗೀತಗಳ ಮೂಲಕ ತಣಿಸುವ ಚುಂಬಕ ಶಕ್ತಿಯನ್ನು ಹೊಂದಿದೆ. ಪ್ರೇಕ್ಷಕರನ್ನು ಕೆಲವು ಗಂಟೆಗಳ ಕಾಲ ಭಾವನಾತ್ಮಕವಾಗಿ ಬಂಧಿಸುವ ಶಕ್ತಿ ಸಿನಿಮಾಕ್ಕಿದೆ. ವಾಸ್ತವವಾಗಿ ಇದು ಒಂದು ಕಲಾಸೃಷ್ಟಿ. ಅಭಿರುಚಿ ಹಾಗೂ ಸೌಂದರ್ಯೋಪಾಸನೆ ಅಂಶಗಳು ಚಲನಚಿತ್ರ ಮಾಧ್ಯಮಕ್ಕೆ ಒಂದು ಹೊಸ ಆಯಾಮವನ್ನು ತಂದು ಕೊಟ್ಟುವು. ಸಮೂಹವನ್ನು ಪರಿಣಾಮಕಾರಿಯಾಗಿ ತಲುಪುವುದು ಮತ್ತು ಜನರ ಮನಸ್ಸಿನ ಮೇಲೆ ಅದ್ಭುತ ಪರಿಣಾಮ ಉಂಟುಮಾಡುವುದು ಸಿನಿಮಾದ ಪ್ರಮುಖ ಗುಣ. ಇಂತಹ ಮಹೋನ್ನತವಾದ ಕಾರ್ಯದಿಂದಾಗಿ ಚಲನಚಿತ್ರ ಒಂದು ವಾಣಿಜ್ಯೋದ್ಯಮವಾಗಿ ಬೆಳೆದು ನಿಂತಿದೆ.

ಚಲನಚಿತ್ರ ಮಾಧ್ಯಮ ಪರಿಣಾಮಕಾರಿಯಾಗಿ ದೃಶ್ಯ ಮಾಧ್ಯಮವಾಗಿ ತನ್ನದೇ ಆದ ಅನ್ಯೋನ್ಯತೆಯನ್ನು ಸಾಧಿಸಿಕೊಂಡು ಬಂದಿದೆ. ಶಬ್ದ ಹಾಗೂ ದೃಶ್ಯಗಳ ಅರ್ಥಪೂರ್ಣವಾದ ಸಂಕಲನದಿಂದ ಸಿನಿಮಾ ಮಾಧ್ಯಮಕ್ಕೆ ಸಮಗ್ರತೆ ದೊರಕುತ್ತದೆ. ಇತರ ಸಾಹಿತ್ಯದಂತೆ ಚಲನಚಿತ್ರವೂ ಕೂಡ ಬದುಕಿನ, ಸಮಾಜದ ಪ್ರತಿಬಿಂಬ. ಇದು ಪ್ರತಿಕ್ರಿಯೆ ಮತ್ತು ಮರುಸೃಷ್ಟಿ. ಇಲ್ಲಿನ ಅಭಿವ್ಯಕ್ತಿಯ ಹಿಂದೆ ಅನುಭವ ಅಡಗಿದೆ.

ಮನುಷ್ಯನ ಭಾವನೆ, ವರ್ತನೆ, ಮತ್ತು ಪ್ರೇರಣೆಗಳಿಂದ ಚಲಚಿತ್ರಗಳ ಸನ್ನಿವೇಶಗಳು ಮೂರ್ತರೂಪ ಪಡೆದುಕೊಳ್ಳುತ್ತದೆ.

ಭಾರತದ ಚಲನಚಿತ್ರ ಕ್ಷೇತ್ರ ಶತಮಾನೋತ್ಸವದ ಸಂಭ್ರಮದ ಆಸುಪಾಸಿನಲ್ಲಿದೆ. ದೃಶ್ಯ ಮತ್ತು ಶ್ರವ್ಯ ಮಾಧ್ಯಮವಾಗಿ ಬಳಕೆಯಲ್ಲಿರುವ ಈ ಸಂಕೀರ್ಣ ಕಲಾರೂಪಕ್ಕೆ ವಿಶಿಷ್ಟವಾದ ಶಾಬ್ದಿಕ ಅನನ್ಯತೆಗಳಿವೆ. ಮಾನವನ ಅವಯವಗಳಾದ ಕಣ್ಣು ಮತ್ತು ಕಿವಿ ಏಕಕಾಲದಲ್ಲಿ ಸಮಾನವಾಗಿ ರಸಗ್ರಹಣ ಮಾಡಿ ಮನೋಭೂಮಿಕೆಯ ಆಹ್ಲಾದವನ್ನು ಪಡೆಯುವಲ್ಲಿ ಸಫಲವಾಗುತ್ತವೆ ಎಂದರೆ ತಪ್ಪಾಗಲಾರದು. ಆಧುನಿಕ ತಂತ್ರಜ್ಞಾನದೊಂದಿಗೆ ನಾಗರಿಕತೆಯ ಬೆಳವಣಿಗೆಯ ಒಟ್ಟೊಟ್ಟಿಗೆ ನವನವೀನವಾದ ಕಲಾರೂಪಗಳು ಪ್ರಪಂಚದಲ್ಲಿ ಹುಟ್ಟುಕೊಂಡುವು.

ತುಳು ನಾಟಕಗಳ ಸಂರಚನೆಗೆ ತುಳು ಭಾಷೆ ಮಹತ್ವದ ಕೊಡುಗೆಯನ್ನು ನೀಡಿದೆ. ಕರ್ನಾಟಕದ ಇತರ ಕಡೆ ಹೋಲಿಸಿದರೆ, ತುಳುನಾಡಿನ ಸಂಸ್ಕೃತಿಯ ಚಿತ್ತಾರವು ತುಸು ವಿಶಿಷ್ಟವಾಗಿಯೇ ಇದೆ. ಇಲ್ಲಿನ ಭೂತಾರಾಧನೆ, ನಾಗಾರಾಧನೆ, ಸಿರಿ ಆರಾಧನೆ, ಕಂಬಳ, ಕೋಳಿ ಅಂಕ, ಚೆಂಡಾಟ, ಕಾಡ್ಯನಾಟ, ನಾಗಮಂಡಲ, ಯಕ್ಷಗಾನ, ಜಾತ್ರೆ ಅಲ್ಲದೆ ಭೌತಿಕ ವಸ್ತುಗಳಲ್ಲಿ ಒಂದೊಂದು ವಿಶಿಷ್ಟ ಇತಿಹಾಸವೇ ಅಡಗಿದೆ. ಕರಾವಳಿಯ ಆಹಾರ ಪದ್ಧತಿ, ಉಡುಗೆ–ತೊಡುಗೆ ಇನ್ನಿತರ ಅನೇಕ ವಿಚಾರಗಳಲ್ಲಿ ಸಂಸ್ಕೃತಿಯ ವೈಶಿಷ್ಟ್ಯಗಳು ಎದ್ದು ಕಾಣುವಂತಿದೆ. ಕರ್ನಾಟಕದ ಇತರ ಪ್ರದೇಶಗಳಿಂದ ಪ್ರತ್ಯೇಕ ಸ್ಥಾನಮಾನವನ್ನು ಈ ತುಳುನಾಡು ಪಡೆದುಕೊಂಡಿದೆ. ಈ ಎಲ್ಲಾ ಗುಣಗಳು ಹಾಗೂ ಕರಾವಳಿ ಸಂಸ್ಕೃತಿಯ ಮಹತ್ವಪೂರ್ಣ ಅಂಶಗಳು ಆಧುನೀಕರಣದತ್ತ ಸಾಗುವಲ್ಲಿ ಆಗುವ ಪಲ್ಲಟ ತಲ್ಲಣಗಳನ್ನು ತುಳು ರಂಗಭೂಮಿಯಲ್ಲಿಯೂ ಪ್ರಚಲಿತವಿರುವುದನ್ನು ಗಮನಿಸಬಹುದಾಗಿದೆ.

೧.೧ ಅಧ್ಯಯನದ ಉದ್ದೇಶ

ತುಳು ಭಾಷೆಯ ಬೆಳವಣಿಗೆಯಲ್ಲಿ ಇಲ್ಲಿನ ಗ್ರಾಮೀಣ ಜನರ ಪಾತ್ರ ಅಧಿಕವಿದೆ. ತುಳು ಭಾಷೆಯು ಪ್ರಬುದ್ಧಾವಸ್ಥೆಗೆ ಬರುವಲ್ಲಿ ತುಳುನಾಡಿನ ನಾಗರಿಕ ಸಮಾಜದ ಕೊಡುಗೆ ಬಹುಮುಖ್ಯವಾದುದು. ತುಳು ಭಾಷೆಯ ಸಾಹಿತ್ಯ ಸೃಷ್ಟಿಯ ಹಿಂದೆ ವಿದ್ವಾಂಸ ವರ್ಗದ ಧಾರಾಳತನ ಹೇಗಿದೇಯೋ ಅಷ್ಟೇ ಮಹತ್ವಪೂರ್ಣವಾದ ಭಾಷಾ ಔದಾರ್ಯ ತುಳುನಾಡಿನ ಗ್ರಾಮೀಣ ಜನರಲ್ಲಿತ್ತು. ಈ ಮಾತಿಗೆ ಪೂರಕವೆಂವರೆ

ತುಳುಭಾಷೆಯ ನಾಟಕದಲ್ಲಿ ಒಡಮೂಡಿರುವ ಸಾಹಿತ್ಯದ ವೈಶಿಷ್ಟ್ಯಗಳನ್ನು ಅವಲೋಕಿಸಿದಾಗ ಅರಿವಿಗೆ ಬರುತ್ತದೆ.

ಈ ಕಾರಣದಿಂದ ಈ ಅಧ್ಯಯನದ ಪ್ರಾರಂಭದಲ್ಲಿ ತುಳು ನಾಟಕಗಳ ಅನನ್ಯತೆಯನ್ನು ಅಧ್ಯಯನಕ್ಕೆ ಒಳಪಡಿಸಿ ಮತ್ತು ತುಳು ಭಾಷೆಯ ಸಿನಿಮಾ ಕೇತ್ರವನ್ನು ಅವಲೋಕಿಸಲಾಗಿದೆ. ಐತಿಹಾಸಿಕ, ಚಾರಿತ್ರಿಕ, ಹಾಗೂ ಸಾಮಾಜಿಕ ಕಥೆಗಳನ್ನೊಳಗೊಂಡ ನಾಟಕಗಳಿಂದ ತುಳು ಭಾಷೆ, ಸಂಸ್ಕೃತಿ, ಅಚ್ಚಳಿಯದಂತೆ ಇಂದಿಗೂ ನಮ್ಮ ಕಣ್ಣ ಮುಂದಿದೆ. ಆದರೆ ಕಾಲದ ಬದಲಾವಣೆಗೆ ತಕ್ಕಂತೆ ತುಳುನಾಡಿನ ಭಾಷೆ ಮತ್ತು ಸಾಹಿತ್ಯ ಜಗತ್ತಿನ ಇತರ ಭಾಷೆ ಸಾಹಿತ್ಯಗಳೊಂದಿಗೆ ಹೊಂದಾಣಿಕೆಯ ಮೂಲಕ ಸ್ಪರ್ಧಾತ್ಮಕವಾಗಿ ತನ್ನ ಸಾಧನೆಯನ್ನು ಪ್ರಕಟಿಸುವಲ್ಲಿ ಸಫಲವಾಗಿದೆ. ತುಳುಭಾಷೆಯ ಕಾದಂಬರಿ ಸಾಹಿತ್ಯದ ಇತಿಹಾಸದ ಜೀವಂತಿಕೆ ಹೇಗಿದೇಯೋ ಅದೇ ತೆರನಾಗಿ ತುಳುನಾಟಕ ಕ್ಷೇತ್ರವೂ ಬದಲಾವಣೆಯ ಮೂಲಕ ಪ್ರವರ್ಧಮಾನದತ್ತ ಸಾಗುತ್ತಾ ಬಂದಿದೆ. ಸಮಗ್ರತೆ, ಜನಾಕರ್ಷಣೆ, ಸಂಗೀತ, ಭಾಷೆಯ ಲಾಲಿತ್ಯ, ವಸ್ತುವಿನ ಆಯ್ಕೆ, ಜನರನ್ನು ತಲುಪುವ ಅದಮ್ಯ ಇರಾದೆ ಇತ್ಯಾದಿ ವಿಚಾರಗಳು ತುಳು ನಾಟಕರಚನೆಕಾರರಲ್ಲಿತ್ತು.

ಮಹತ್ತರದ ಬದಲಾವಣೆಯೊಂದಿಗೆ ಯಶಸ್ಸನ್ನು ಕಂಡ ತುಳು ರಂಗಭೂಮಿಕ್ಷೇತ್ರ ನಂತರದಲ್ಲಿ ಜಾಗತಿಕವಾಗಿ ವಾಣಿಜ್ಯೋದ್ಯಮ ಮಾದರಿಯಲ್ಲಿ ಬೆಳೆದು ಸಿನಿಮಾಕ್ಷೇತ್ರದ ಕಡೆಗೆ ಬಹು ಸರಳವಾಗಿ ಹೊರಳಿಕೊಂಡಿತು. ಕಾಲದ ಅನಿವಾರ್ಯತೆ ಮತ್ತು ಕಲೆ ಹಾಗೂ ಸಾಹಿತ್ಯದ ಜೀವಂತಿಕೆಯ ದ್ಯೋತಕವಾಗಿ ಈ ಬದಲಾವಣೆ ಕರಾವಳಿ ರಂಗಭೂಮಿ ಸಿನೆಮಾ ಕ್ಷೇತ್ರದತ್ತ ಸಾಗಿತು. ಹೀಗೆ ತುಳು ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರ ಪಲ್ಲಟದ ಸಂಕ್ರಮಣದ ಹಿಂದಿನ ಅನನ್ಯತೆಯನ್ನು ಹುಡುಕುವ ಮತ್ತು ಅದರ ಗತ ಇತಿಹಾಸವನ್ನು ಮೆಲುಕು ಹಾಕಿ ದಾಖಲಿಸುವ ಉದ್ದೇಶ ಈ ಅಧ್ಯಯನದಲ್ಲಿದೆ.

ನಾಟಕವು ಸಾಮಾಜಿಕ ಸ್ವಾಸ್ಥ್ಯವನ್ನು ಬಯಸುವ ಒಂದು ಕಲಾಮಾದರಿ. ವ್ಯಕ್ತಿಯ ಅಭಿವ್ಯಕ್ತಿಯ ಮೂಲಕ ಹುಟ್ಟಿಕೊಂಡ ಈ ಪ್ರಬೇಧ ರಂಗದಲ್ಲಿ ಅಭಿನಯದ ಮೂಲಕ ಪ್ರೇಕ್ಷಕರಿಗೆ ವರ್ಗಾವಣೆಯಾಗುವ ಕಲಾಮಾಧ್ಯಮವಾಗಿದೆ. ಹೀಗಿರುವಾಗ ಇದರ ಹಿಂದಿರು ಅನೇಕ ಪ್ರಯತ್ನ, ಪರಿಶ್ರಮಗಳು, ಈ ಮಾಧ್ಯಮ ರೂಪುಗೊಳ್ಳುವ ಹಿಂದಿರುವ ಇಚ್ಛಾಶಕ್ತಿ, ಅದರ ಹಿನ್ನೆಲೆಯಲ್ಲಿ ಕಾರ್ಯಕಾರಣವಾಗುವ ಭಾಷೆ, ಸಾಹಿತ್ಯ,

ಸಂಗೀತ ಅಲ್ಲದೇ ಬಳಸಲ್ಪಡುವ ಪರಿಕರಗಳ ಸ್ವರೂಪ ಇತ್ಯಾದಿ ವಿಚಾರಗಳನ್ನು ಗಮನಿಸಿ ವಿಮರ್ಶೆಯ ನೆಲೆಯಲ್ಲಿ ದಾಖಲಿಸಿ ನಮ್ಮ ಮುಂದಿನ ಜನಾಂಗದ ಮುಂದಿಡುವ ಅನಿವಾರ್ಯತೆ ಇದೆ.

ನಾಟಕವು ಕಾಲಗತಿಯಲ್ಲಿ ಸಮಾಜಕ್ಕೂ ತನಗೂ ಇರುವ ಸಂಬಂಧವನ್ನು ಗಮನಿಸಿಕೊಂಡು ತನ್ನ ಉದ್ದೇಶವನ್ನು ಹಿಗ್ಗಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿ ಸಮಾಜದ ಅಂಕುಡೊಂಕುಗಳನ್ನು ತೋರಿಸಿ ತಿದ್ದಲು ಪ್ರಯತ್ನಿಸುತ್ತದೆ. ಹದಿನಾರು ಹದಿನೇಳನೇ ಶತಮಾನದಲ್ಲಿ ಪಾಶ್ಚಾತ್ಯ ರಂಗಭೂಮಿಯಲ್ಲಿ ಉಂಟಾದ ಅಮೋಘ ಮಾರ್ಪಾಡುಗಳು ಭಾರತದ ನೆಲದಲ್ಲಿಯೂ ಅದೇ ಬದಲಾವಣೆಯ ಗಾಳಿ ಬೀಸಲಾರಂಭಿಸಿತು. ವಿದೇಶಿ ನಾಟಕ ಕಂಪನಿಗಳ ಪ್ರದರ್ಶನದಿಂದ ಪ್ರೇರಣೆ ಪಡೆದ ಮೈಸೂರು ರಾಜರು ತನ್ನ ಆಸ್ಥಾನ ಕವಿಗಳಿಗೆ ಈ ಬಗೆಯ ರಚನೆಗಳ ಉತ್ಪತ್ತಿಗೆ ಉತ್ತೇಜ ನೀಡಿರುವುದು ಕನ್ನಡದ ಸಂದರ್ಭದಲ್ಲಿ ಗಮನಿಸತಕ್ಕ ವಿಚಾರ. ಈ ಮಾದರಿಯಲ್ಲಿ ತುಳುಭಾಷೆಯಲ್ಲಿ ಹುಟ್ಟಿಕೊಂಡ ರಂಗ ಪ್ರಹಸನಗಳನ್ನು ಗಮನಿಸುವ ಅಗತ್ಯವೂ ಈ ಅಧ್ಯಯನದಲ್ಲಿದೆ.

ರಂಗಪ್ರಯೋಗದಲ್ಲಿ ಉಂಟಾದ ವಿವಿಧ ಪಂಥಗಳ ಪ್ರಭಾವಗಳು; ಸಂಸ್ಕೃತ ರಂಗರೂಪಗಳ ಸಿದ್ಧಮಾದರಿಗಳನ್ನೂ, ಮೂಲ ತತ್ತ್ವಗಳನ್ನೂ ಮೀರಿ ಹೊಸಬಗೆಯ ಸಾಧ್ಯತೆಗೆ ತುಳು ರಂಗಭೂಮಿಯಲ್ಲಿಯೂ ಪ್ರಯೋಗವಾಗಿರುವುದು ಗಮನಾರ್ಹ ವಿಚಾರ. ಇನ್ನು ತುಳು ಸಿನೆಮಾಕ್ಷೇತ್ರವನ್ನು ಅವಲೋಕಿಸಿದರೆ **'ಬಾಲಿವುಡ್'** ಎಂದು ಕರೆಯುವ ಮಹಾರಾಷ್ಟ್ರದ ಮಹಾನಗರ ಮುಂಬೈಯ ಹಿಂದಿ ಭಾಷೆಯ ಸಿನಿಮಾಗಳು, **'ಸೇಂಡಲ್‌ವುಡ್'** ಎಂದೇ ಖ್ಯಾತಿಯ ಕರ್ನಾಟಕದ ಕನ್ನಡಭಾಷಾ ಸಿನಿಮಾ, ಹಾಗೂ **'ಮೋಲಿವುಡ್'** ನಾಮಾಂಕಿತ ಮಲಯಾಳ ಭಾಷಾ ಸಿನೆಮಾಗಳ ಪ್ರಭಾವವಿದೆ. ಆದರೆ ಗಮನಿಸಬೇಕಾದ ವಿಚಾರವೆಂದರೆ ತುಳುಭಾಷಾ ಸಿನೆಮಾಗಳ ಮೂಲ ಪ್ರೇರಣೆ ಮತ್ತು ಆದರ್ಶ ತುಳುನಾಡಿನ ಪ್ರಾದೇಶಿಕತೆಯೇ ಆಗಿದೆ.

ತುಳುಭಾಷೆ ನಾಟಕ ಸಾಹಿತ್ಯದಲ್ಲಿ ಅನೇಕ ಪ್ರಹಸನಗಳು ಪ್ರಕಟವಾಗಿವೆ. ರಂಗ ಪ್ರದರ್ಶನಗೊಂಡಿವೆ. ಇನ್ನು ಅನೇಕ ನಾಟಕಗಳು ಹಸ್ತಪ್ರತಿಯಲ್ಲಿದ್ದುಕೊಂಡೇ ಪ್ರದರ್ಶನದಲ್ಲಿ ಯಶಸ್ವಿ ಕಂಡಿವೆ. ಈ ನೆಲೆಯಲ್ಲಿ ತುಳು ಭಾಷೆಯ ನಾಟಕ ಮತ್ತು ಸಿನೆಮಾ ಕ್ಷೇತ್ರಗಳ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ನಾಟಕಕರ್ತೃಗಳ, ಕಲಾವಿದರ ನಿರ್ದೇಶಕರ, ನಿರ್ಮಾಪಕರ, ಪ್ರಯೋಜಕರ ಹಾಗೂ ಒಟ್ಟಾಗಿ ಈ ಎರಡು

ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ತುಳು ಕಲಾಕ್ಷೇತ್ರಕ್ಕೆ ಮೆರುಗು ತಂದಿರುವ ಬಗೆಯನ್ನೂ ಅನನ್ಯತೆಯನ್ನೂ ಬಹುತ್ವದ ನೆಲೆಯಲ್ಲಿ ಈ ಅಧ್ಯಯನದಲ್ಲಿ ಅವಲೋಕಿಸಲಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ತುಳುಭಾಷಾ ರಂಗಭೂಮಿಯ ಇತಿಹಾಸದಲ್ಲಿ ಅನೇಕ ಹವ್ಯಾಸಿ ಹಾಗೂ ವೃತ್ತಿಪರವಾದ ನಾಟಕ ತಂಡಗಳಿರುವುದು ಕಂಡುಬರುತ್ತದೆ. **ಕರಾವಳಿ ಹವ್ಯಾಸಿ ನಾಟಕ ಕಲಾವಿದರ ತಂಡವನ್ನು 'ಬೆವರು ಆರುವ ಹೊತ್ತಿನ ಕಲಾವಿದರು' ಎಂದು ಗೌರವಿಸಲಾಗಿದೆ. ಕಾರಣವೆಂದರೆ ಇವರು ಹಗಲು ಹೊತ್ತಿನಲ್ಲಿ ಜೀವನ ನಿರ್ವಹಣೆಗಾಗಿ ಗಾರೆ ಕೆಲಸ, ಅಧ್ಯಾಪನ, ಚಾಲಕ, ವ್ಯಾಪಾರ ಇತ್ಯಾದಿ ದಿನಗೂಲಿ ನೌಕರಿಮಾಡಿ ಸಂಜೆಯ ಹೊತ್ತು ಊರಿನ ಶಾಲೆ, ಮಂದಿರ ಅಥವಾ ಸಂಘ ಸಂಸ್ಥೆಗಳ ಆವರಣದಲ್ಲಿ ಒಟ್ಟು ಸೇರಿ ನಾಟಕ ಪಠ್ಯವನ್ನು ಆರಿಸಿ ಅಭ್ಯಾಸ ಮಾಡಿ ಊರಿನ ವಿದ್ಯಾಸಂಸ್ಥೆಯ ವಾರ್ಷಿಕೋತ್ಸವ ಅಥವಾ ಜಾತ್ರಾ ಸಂದರ್ಭಗಳಿಗೆ ಪ್ರದರ್ಶನಕ್ಕೆ ತಯಾರಾಗುತ್ತಿದ್ದರು.** ಆದರೆ ವೃತ್ತಿರಂಗಭೂಮಿಯ ಕಲಾವಿದರು ಸಂಪಾದನೆಯ ದೃಷ್ಟಿಯಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಈ ಕಾರಣದಿಂದ ಈ ಎರಡೂ ವರ್ಗದ ರಂಗಕಲಾವಿದರ ಕಲಾಜೀವನ, ನಾಟಕದ ವಸ್ತು, ನಟನಾ ಕೌಶಲ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಇವೆಲ್ಲವನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

ತುಳು ರಂಗಭೂಮಿಯ ಭಾಷೆ, ಸಾಹಿತ್ಯ, ಸಂಸ್ಕೃತಿ, ವಸ್ತು, ತಂತ್ರ, ಶೈಲಿ, ಮತ್ತು ನಾಟಕಗಳು ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬೀರಿರುವ ಹಿತಾಸಕ್ತಿ, ನಿಯಮ, ನಿರ್ಬಂಧಗಳ ಹಿನ್ನೆಲೆಯನ್ನು ಬಹುಮಟ್ಟಿಗೆ ಈ ಅಧ್ಯಯನದಲ್ಲಿ ಪ್ರಸ್ತುತಪಡಿಸಲಾಗಿದೆ.

ತುಳುಭಾಷಾ ರಂಗಭೂಮಿಯು ತುಳು ಸಿನೆಮಾದ ಮೇಲೆ ಬೇರೆ ಬೇರೆ ವಿಚಾರದಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿದೆ. ನಾಟಕದಲ್ಲಿ ಅಭಿವ್ಯಕ್ತಗೊಂಡ ಪ್ರಾದೇಶಿಕತೆ ಸಿನಿಮಾದಲ್ಲಿನ ಭಿನ್ನತೆ, ತುಳು ಸಿನಿಮಾದ ಉದ್ದೇಶ, ನಾಡು ನುಡಿಯ ಕಾಳಜಿ, ಸಂಸ್ಕೃತಿಯ ಕುರಿತಾದ ಚಿಂತನೆ, ವೈಚಾರಿಕತೆಗಳ ಪ್ರಭಾವ, ಧೋರಣೆ ಇತ್ಯಾದಿ ಸಂಗತಿಗಳನ್ನು ಈ ಅಧ್ಯಯನದಲ್ಲಿ ಅವಲೋಕಿಸಿ ಚರ್ಚಿಸಲಾಗಿದೆ.

ತುಳು ನಾಟಕ ರಂಗಕ್ಕೆ ಸರಿಸುಮಾರು ೯೦ ದಶಕಗಳ ಇತಿಹಾಸವಿರುವಂತೆ ತುಳು ಸಿನಿಮಾ ಕ್ಷೇತ್ರಕ್ಕೂ ಸಾಧಾರಣ ೬೦ ದಶಕಗಳ ಹಿನ್ನೆಲೆ ಇರುವುದರಿಂದ ಈ

ಎರಡೂ ಕ್ಷೇತ್ರಗಳ ಪ್ರೇರಣೆ ಮತ್ತು ಅನನ್ಯತೆಗಳನ್ನು ತೌಲನಿಕ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೩ **ಅಧ್ಯಯನದ ವೈಧಾನಿಕತೆ**

ತುಳುಭಾಷೆಯ ಪ್ರಕಟಗೊಂಡ ನಾಟಕ ಕೃತಿಗಳ ಬಗೆಗಾಗಲಿ, ಹಸ್ತಪ್ರತಿಯ ಆಧಾರದಲ್ಲಿ ಪ್ರದರ್ಶನಗೊಂಡು ದಾಖಲಾಗಿರುವ ನಾಟಕಗಳ ಕುರಿತಾಗಲಿ ಆಳವಾದ ವಿಮರ್ಶಾತ್ಮಕ ಅಧ್ಯಯನಗಳು ನಡೆದಿಲ್ಲ. ತುಳು ರಂಗಭೂಮಿ ಮತ್ತು ಸಿನೆಮಾ ಕ್ಷೇತ್ರದ ಕುರಿತು ಚರ್ಚಿಸಿರುವ ಕೃತಿಗಳಲ್ಲಿ ಕೇವಲ ಕರಾವಳಿ ತುಳು ಭಾಷೆಯಲ್ಲಿ ಪ್ರದರ್ಶನಗೊಂಡ ನಾಟಕಗಳ ವಿವರಗಳು ಕಲಾವಿದರ ಮಾಹಿತಿಗಳು ವಿವರಣಾತ್ಮಕವಾದ ದಾಖಲೀಕರಣಗಳು ನಡೆದಿವೆಯಷ್ಟೆ.

'ತುಳು ರಂಗಭೂಮಿ ಮತ್ತು ಸಿನೆಮಾ: ಪ್ರೇರಣೆ ಮತ್ತು ಅನನ್ಯತೆ' ಎನ್ನುವ ವಿಷಯದ ಈ ಅಧ್ಯಯನದಲ್ಲಿ ಮುಖ್ಯವಾಗಿ **ತುಳು ನಾಟಕ ಹಾಗೂ ಸಿನೆಮಾಗಳ ಸಾಹಿತ್ಯಕ ಅಂಶ, ಅದಕ್ಕೆ ಕಾರಣವಾಗಿರುವ ಪ್ರೇರಣೆ, ಪ್ರಚೋದನೆ, ಸಾಮಾಜಿಕ ಅನನ್ಯತೆ, ರಾಜಕೀಯ ಒತ್ತಾಸೆ, ಧಾರ್ಮಿಕ ಅಥವಾ ಆಧ್ಯಾತ್ಮಿಕ ಪ್ರಭಾವ, ಚಾರಿತ್ರಿಕ ಹಿನ್ನಲೆ, ವಸಾಹತು ಮತ್ತು ವಸಾಹತೋತ್ತರ ಪ್ರಭುತ್ವಗಳ ವೈಚಾರಿಕ ಒತ್ತಡ ಹೀಗೆ ಹತ್ತು ಹಲವು ಕಾರಣಗಳನ್ನು ಕೂಲಂಕುಷವಾಗಿ ವಿಮರ್ಶಾತ್ಮಕ ಮತ್ತು ವಿವರಣಾತ್ಮಕ ನೆಲೆಯಲ್ಲಿ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ**.

ಸಾಂಸ್ಕೃತಿಕ ನೆಲೆಯೊಂದಿಗೆ ಪ್ರಾದೇಶಿಕ ಭಾಷಾ ಪ್ರಯೋಗದ ಭಿನ್ನತೆ, ವೈಶಿಷ್ಟ್ಯ, ಸಾಮಾಜಿಕ ರಂಗದಲ್ಲಿ ವ್ಯಾಪಿಸಿರುವ ವರ್ಣ, ವರ್ಗ ತಾರತಮ್ಯ, ಸಮಾಜ ಮತ್ತು ಕೌಟುಂಬಿಕ ನೆಲೆಯಲ್ಲಿ ಸ್ತ್ರೀ–ಪುರುಷರ ಅಂತರ್ ಸಂಬಂಧಗಳು, ನಾಟಕಗಳಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆ, ಸಮಾಜದ ಉನ್ನತಿಗೆ ನಾಟಕ ಹಾಗೂ ಸಿನಿಮಾಗಳ ಪಾತ್ರ, ಸ್ವಾತಂತ್ರ್ಯ ಹಾಗೂ ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದ ನಾಟಕಗಳ ಮೌಲ್ಯಗಳನ್ನು ಮತ್ತು ಅದು ಬೀರಿರುವ ಪ್ರಭಾವಗಳನ್ನು ಪಠ್ಯಕೇಂದ್ರಿತವಾಗಿಯೂ, ಸಮಾಜಮುಖಿ ನೆಲೆಯಲ್ಲಿಯೂ ವಿಶ್ಲೇಷಣಾತ್ಮವಾಗಿ ಚರ್ಚಿಸಲಾಗಿದೆ. ಒಟ್ಟಾಗಿ ಸಂಸ್ಕೃತಿಮುಖಿಯಾದ ಬಹುನೆಲೆಯ ಸಂಶೋಧನಾ ಮಾದರಿಯನ್ನು, ತೌಲನಿಕ ವಿಧಾನವನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಮೂಲ ಪಠ್ಯಗಳು ಮತ್ತು ಪೂರಕ ಮಾಹಿತಿಗಳ ಆಧಾರದಲ್ಲಿ ಸಂಪ್ರಬಂಧದ ಅಧ್ಯಾಯಗಳನ್ನು ವಿಭಾಗಿಸಿ ವಿವರಣಾತ್ಮಕವಾಗಿ ಚರ್ಚಿಸಲಾಗಿದೆ.

ಇದುವರೆಗೆ ನಡೆದಿರುವ ಅಧ್ಯಯನಗಳ ಸಾಹಿತ್ಯ ಸಮೀಕ್ಷೆ

ತುಳು ಭಾಷೆಯಲ್ಲಿ ಮೂಡಿಬಂದಿರುವ ಅನೇಕ ನಾಟಕಗಳ ಕುರಿತಾದ ಭಿನ್ನ ಭಿನ್ನ ಅಭಿರುಚಿಯ ಬರಹಗಾರರು ಈಗಾಗಲೇ ಬಿಡಿಬಿಡಿಯಾದ ಲೇಖನಗಳನ್ನು ಸೀಮಿತ ಪುಟಗಳ ಕಿರು ಸಂಶೋಧನ ಪ್ರಬಂಧಗಳನ್ನು, ವಿಮರ್ಶೆಗಳನ್ನು, ಪತ್ರಿಕೆ, ವಿಶೇಷಾಂಕ, ಅಭಿನಂಧನ ಗ್ರಂಥ ಮುಂತಾದ ಕೃತಿಗಳಲ್ಲಿ ಪ್ರಕಟಿಸಿರುವರು. ಹಾಗೂ ಒಟ್ಟು ನಾಟಕದ ಅದಮ್ಯ ಆಸಕ್ತಿಯಿಂದ ತೊಡಗಿಸಿಕೊಂಡ ಕೆಲವೇ ಕೆಲವು ಸಂಶೋಧಕರು ತುಳುರಂಗಭೂಮಿ ಹಾಗೂ ತುಳು ಭಾಷೆಯ ಸಿನಿಮಾದ ಕುರಿತಾಗಿ ಕೆಲವು ಕೃತಿಗಳನ್ನು ಪ್ರಕಟಿಸಿದ್ದಾರೆ.

ಹೀಗೆ ಬಂದಿರುವ ಬಹುಮುಖ್ಯ ಲೇಖನ ಮತ್ತು ಕೃತಿಗಳನ್ನು ಇಲ್ಲಿ ಸಮೀಕ್ಷೆಗೆ ಒಳಪಡಿಸಿ ತಾತ್ವಿಕವಾಗಿ ಚರ್ಚಿಸಲಾಗಿದೆ.

ತುಳುಭಾಷೆಯ ನಾಟಕಕ್ಕೆ ಸಂಬಂಧಿಸಿದ ಸಂಶೋಧನ ಬರಹಗಳು

ತುಳುಭಾಷೆಯ ನಾಟಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೨೦೦೫ನೇ ಇಸವಿಯಲ್ಲಿ ಬಂದಿರುವ ಮುದ್ದುಮೂಡುಬೆಳ್ಳೆಯವರ ಕೃತಿ **'ತುಳು ರಂಗಭೂಮಿ'**. ಇವರು ಈ ಕೃತಿ ಬಗ್ಗೆ 'ನಾಟಕ ಪರಂಪರೆಯ ಸಮಗ್ರ ಆಧ್ಯಯನ ಸಾರ' ಎಂದು ಕರೆದಿದ್ದಾರೆ.

ತುಳು ರಂಗಭೂಮಿಗೆ ಸಂಬಂಧಿಸಿದ ಮುದ್ದು ಮೂಡುಬೆಳ್ಳೆಯವರ ಇನ್ನೊಂದು ಕೃತಿ **'ತುಳು ನಾಟಕ ಪರಂಪರೆ'**. ೨೦೧೯ರಲ್ಲಿ ಪ್ರಕಟವಾಗಿರುವ ಈ ಪುಸ್ತಕ ಅವರದೇ ಹಿಂದೆ ಪ್ರಕಟಿಸಿದ 'ತುಳು ರಂಗಭೂಮಿ' ಕೃತಿಯಲ್ಲಿರುವ ಲೇಖನಗಳಿಗೆ ವಿಸ್ತೃತ ರೂಪವನ್ನು ನೀಡಿ ಹೆಚ್ಚಿನ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

೧೯೮೯ ರಲ್ಲಿ ಪ್ರಕಟಗೊಂಡ **'ಪನಿಯಾರ'**–ಅಖಿಲ ಭಾರತ ತುಳು ಸಮ್ಮೇಳನ ಸ್ಮರಣ ಸಂಚಿಕೆ–೮೯' ಕೃತಿಯಲ್ಲಿ ಐ. ಕೆ ಬೊಳುವಾರು ಅವರ 'ತುಳು ನಾಟಕೊಲು–ನಾಲ್ ಪಾತೆರೊ' ಎಂಬ ಲೇಖನ ಪ್ರಕಟಗೊಂಡಿದೆ.

೧೯೯೪ರ ವಿಶ್ವತುಳು ಸಮ್ಮೇಳನ ಸ್ಮರಣ ಸಂಚಿಕೆ **'ಕದಿಕೆ'** ಯಲ್ಲಿ ಯು. ಆರ್ ಚಂದರ್ ಅವರ 'ತುಳು ರಂಗಭೂಮಿದ ಸಮಸ್ಯೆಲು' ಎಂಬ ಲೇಖನವಿದೆ.

ಅಕ್ಟೋಬರ್–ಡಿಸೆಂಬರ್ ೨೦೦೫ರ **'ಆತ್ಮಶಕ್ತಿ'** ತ್ರೈಮಾಸಿಕ ಪತ್ರಿಕೆಯಲ್ಲಿ ಪಿ. ಎಲ್ ಧರ್ಮ ಅವರ 'ನಮ್ಮ ತುಳು ನಾಟಕಗಳು ಗಮನಿಸಬೇಕಾದ ಅಂಶಗಳು' ಎಂಬ ಲೇಖನ ಪ್ರಕಟಗೊಂಡಿದೆ.

೨೦೦೭ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿಂದ ಪ್ರಕಟಗೊಂಡ **'ತುಳು ಸಾಹಿತ್ಯ ಚರಿತ್ರೆ'** ಕೃತಿಯಲ್ಲಿ ಕೆ. ಮಹಾಲಿಂಗ ಅವರ 'ಪ್ರಕಟಿತ ತುಳು ನಾಟಕಗಳು' ಎಂಬ ಸಂಶೋಧನಾತ್ಮಕ ಲೇಖನವಿದೆ.

ಅಪ್ರಕಟಿತ ಸಂಶೋಧನ ಮಹಾಪ್ರಬಂಧಗಳು

'ತುಳು ನಾಟಕ ಪರಂಪರೆ ಮತ್ತು ಪ್ರಯೋಗ' ಎಂಬ ವಿಷಯದ ಆಧಾರದಲ್ಲಿ ಸಂತೋಷ್ ಆಳ್ವ ಎಂಬವರು ಮಾಧವ ಪೆರಾಜೆಯವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿಹೆಚ್.ಡಿ ಪದವಿಗಾಗಿ ಪ್ರಬಂಧವನ್ನು ಸಲ್ಲಿಸಿರುತ್ತಾರೆ.

ತುಳು ನಾಟಕಗಳಲ್ಲಿ ಸ್ತ್ರೀ, ತುಳುನಾಟಕಗಳಲ್ಲಿ ಹಾಸ್ಯದ ಪ್ರತಿಪಾದನೆ, ತುಳುವಿನಲ್ಲಿ ಹೊಸ ಅಲೆಯ ನಾಟಕಗಳು ಎಂದು ವಿಂಗಡಿಸಿ ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

'ತುಳು ಸಿನಿಮಾ ಮತ್ತು ದೇಸೀ ಸಂಸ್ಕೃತಿ' ಎನ್ನುವ ವಿಷಯದ ಮೇಲೆ ಪ್ರಶಾಂತ್ ಎ. ಎಸ್ ಅವರು ಎ. ಸುಬ್ಬಣ್ಣ ರೈಗಳ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ೨೦೨೩ ರಲ್ಲಿ ಪಿಹೆಚ್.ಡಿ ಪದವಿಗಾಗಿ ಮಹಾಪ್ರಬಂಧವನ್ನು ಸಲ್ಲಿಸಿರುತ್ತಾರೆ.

ತುಳುಭಾಷೆಯ ಸಿನಿಮಾಕ್ಕೆ ಸಂಬಂಧಿಸಿದ ಸಂಶೋಧನ ಬರಹಗಳು

ತುಳುನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ತುಳು ಸಿನಿಮಾ ಕ್ಷೇತ್ರಕ್ಕೆ ಐದು ದಶಕಗಳ ಹಿನ್ನೆಲೆಯಿದೆ. ಮಂಗಳೂರಿನಲ್ಲಿ **'ಚಿತ್ರಭಾರತಿ'** ಎಂಬ ಸಂಸ್ಥೆ ಚಿತ್ರ ನಿರ್ಮಾಪಕ ಹಾಗೂ ವಿತರಕರ ಕಾಯಕದಲ್ಲಿ ತೊಡಗಿಸಿಕೊಂಡಿದ್ದದ್ದು ಇಂದಿಗೆ ಗತ ವೈಭವದ ಸಂಕೇತ. ಈ ರೀತಿಯಲ್ಲಿ ತುಳು ಸಿನಿಮಾಕ್ಷೇತ್ರ ಮಹತ್ವಪೂರ್ಣದ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಈ ಅಧ್ಯಯನ, ಅದಕ್ಕೆ ಸಂಬಂಧಿಸಿದ ಇನ್ನೂ ಅನೇಕ ವಿಚಾರಗಳನ್ನು ಅನ್ವೇಷಿಸುವ ಉದ್ದೇಶವನ್ನು ಇಟ್ಟುಕೊಂಡಿದೆ.

ನಾ.ದಾಮೋದರ ಶೆಟ್ಟಿ ಮತ್ತು ಎಂ. ರತ್ನಕುಮಾರ್ ಅವರ ಸಂಪಾದಕತ್ವದಲ್ಲಿ ೨೦೦೬ ರಲ್ಲಿ **'ಚಿತ್ರಭಾರತಿ'** ಎಂಬ ಸ್ಮರಣ ಸಂಚಿಕೆ ಪ್ರಕಟಗೊಂಡಿದೆ. ಡಿ. ವೀರೇಂದ್ರ ಹೆಗ್ಗಡೆ ಅವರ ಶುಭಾಶಯದ ಮಾತುಗಳೊಂದಿಗೆ ಕರಾವಳಿ ಇತರ ಗಣ್ಯರು ಕೆಲವು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಈ ಕೃತಿಯಲ್ಲಿ ಕರಾವಳಿಯಲ್ಲಿ ತುಳು ಭಾಷೆಯಲ್ಲಿ ಪ್ರಪ್ರಥಮವಾಗಿ ಪ್ರದರ್ಶನಗೊಂಡ 'ಎನ್ನ ತಂಗಡಿ' ಸಿನಿಮಾದ ಕಿರು ವಿವರಗಳೊಂದಿಗೆ ನಂತರದಲ್ಲಿ ತುಳು ಭಾಷೆಯಲ್ಲಿ ಪ್ರದರ್ಶನ ಪಡೆದ ಒಟ್ಟು ೩೬ ಚಲನಚಿತ್ರಗಳ ನಿರ್ದೇಶಕ,

ನಿರ್ಮಾಪಕ, ಕಥೆ–ಸಂಭಾಷಣೆ, ತಾರಾಗಣ, ಪ್ರದರ್ಶನಗೊಂಡ ಟಾಕೀಸ್, ಆರ್ಥಿಕ ಸಹಕಾರ ನೀಡಿದವರ ಮಾಹಿತಿಯನ್ನು ಒಳಗೊಂಡಿದೆ.

ತಮ್ಮ ಲಕ್ಷ್ಮಣ ಎಂಬವರು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಪ್ರಕಾಶನದ ಮೂಲಕ **'೫೦ ತುಳು ಸುವರ್ಣ ಚಲನಚಿತ್ರಗಳು'** ಎಂಬ ಕೃತಿಯನ್ನು ೨೦೧೪ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯ 'ಮೊದಲ ನುಡಿ'ಯಲ್ಲಿ ಲೇಖಕರು "ತುಳು ಚಿತ್ರರಂಗದ ವಿಷಯ, ತುಳುಭಾಷೆಯ ಚಿತ್ರಗಳ ವಿಷಯ, ತುಳುಚಿತ್ರಗಳನ್ನು ಕೊಡುಗೆ ನೀಡಿದ ನಿರ್ಮಾಪಕರ ವಿಷಯ ಜನರು ಅರಿತುಕೊಳ್ಳಲಿ ಎಂಬ ಉದ್ದೇಶದಿಂದ ತುಳು ಸಿನಿಮಾದ ಮಾಹಿತಿ ಸಂಗ್ರಹಿಸಿ ಇಡಲು ಯತ್ನಿಸಿದೆ. ಯಾರೋ ಮಾಡಿದ ಚಿತ್ರಗಳನ್ನು ಯಾರದೋ ಹೆಸರಿನಲ್ಲಿ ಹೇಳಿ ಗೊಂದಲ ಉಂಟು ಮಾಡುವ ಬದಲು ಸರಿಯಾದ ತಿಳುವಳಿಕೆ ಇರಲಿ ಎಂಬುವುದು ನನ್ನ ಪ್ರಯತ್ನ. ಹಿಂದಿನ ಹಿರಿಯರು ಮಾಡಿದ ಸಾಧನೆಯನ್ನು, ಇಂದಿನ ನವಪೀಳಿಗೆಯವರು ಅರಿತುಕೊಳ್ಳಲಿ, ಮುಂದಿನ ಜನಾಂಗಕ್ಕೆ ತಿಳಿಯಲಿ ಎಂಬ ಭಾವನೆಯಲ್ಲಿ ನಾನು ಈ ಕಾರ್ಯಕ್ಕೆ ಕೈ ಹಾಕಿದೆ" ಎಂದಿದ್ದಾರೆ.

ತುಳು ನಾಟಕ ಮತ್ತು ಸಿನೆಮಾಗಳ ಇದುವರೆಗಿನ ಅಧ್ಯಯನಗಳು ಅಕಾಡೆಮಿಕ್ ವಲಯದ ಹೊರಗಿನ ಅಧ್ಯಯನವಾಗಿರುವುದು ಗಮನಿಸತಕ್ಕ ವಿಚಾರ. ಆದರೆ ಈ ಎರಡೂ ಕ್ಷೇತ್ರಗಳು ಹೆಚ್ಚು ಹೆಚ್ಚು ಪ್ರಚಲಿತಕ್ಕೆ ಒಳಗಾದಾಗ ಮತ್ತು ತನ್ನ ನೆಲೆಯನ್ನು ಬಹುನೆಲೆಯಲ್ಲಿ ವಿಸ್ತರಿಸಿಕೊಂಡು ಬೆಳೆದಾಗ ಅದು ವಿಶ್ವವಿದ್ಯಾಲಯ ಪಟ್ಟದ ಅಧ್ಯಯನ ಶಿಸ್ತಿಗೆ ಭಾಗವಾಗುವುದು ಸಹಜ ಪ್ರಕ್ರಿಯೆ. ಈ ನಿಟ್ಟಿನಲ್ಲಿ ಪಿಹೆಚ್. ಡಿ ಪದವಿಗೆ ಸಂಬಂಧಿಸಿದ ಪ್ರಬಂಧಗಳನ್ನು ಇಲ್ಲಿ ಅವಲೋಕಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ

'ತುಳು ರಂಗಭೂಮಿ ಮತ್ತು ಸಿನೆಮಾ: ಪ್ರೇರಣೆ ಮತ್ತು ಅನನ್ಯತೆ' ಎನ್ನುವ ವಿಷಯದಲ್ಲಿ ನಡೆಸಿದ ಈ ಸಂಶೋಧನೆ ಅನುಕೂಲತೆಗಾಗಿ ಒಟ್ಟು **ಏಳು ಅಧ್ಯಾಯಗಳಾಗಿ** ವಿಂಗಡಿಸಲಾಗಿದೆ. ಸಂಶೋಧನೆಯ ಸ್ವರೂಪವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ, ಇದುವರೆಗೆ ನಡೆದ ಅಧ್ಯಯನಗಳ ಸಾಹಿತ್ಯ ಸಮೀಕ್ಷೆ ಮತ್ತು ಅಧ್ಯಯನದ ಸ್ವರೂಪಗಳನ್ನು ವಿವರಿಸಲಾಗಿದೆ.

ತುಳು ರಂಗಭೂಮಿಯ ಒಟ್ಟು ಆಶಯವನ್ನು ಗಮನಿಸಿದಾಗ ಅಲ್ಲಿ ಸಮಾಜದ ಸಾಂಸ್ಕೃತಿಕ ಪ್ರತಿಬಿಂಬ ಕಂಡುಬರುತ್ತದೆ. ವಿಡಂಬನೆಯೊಂದಿಗೆ ಜನರ ಬದುಕನ್ನು ತಿದ್ದುವ ಕಾಳಜಿ ಕಲಾವಿದರಲ್ಲಿದೆ. ಧಾರ್ಮಿಕ ಹಿನ್ನೆಲೆ ಮತ್ತು ಸಾಮಾಜಿಕ ಪ್ರತಿನಿಧೀಕರಣ ತುಳು ರಂಗ ಕಲೆ ಮತ್ತು ಸಿನಿಮಾಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಈ ಕಾರಣದಿಂದ ತುಳು ರಂಗಭೂಮಿಯ ಆರಂಭದ ನಾಟಕಗಳು ಮತ್ತು ಅವುಗಳಿಂದ ಪ್ರೇರಿತಗೊಂಡು ಪ್ರದರ್ಶನಗೊಂಡ ಸಿನೆಮಾಗಳು ಸಾಮಾಜಿಕ ಮತ್ತು ಸಾಹಿತ್ಯ ಮೌಲ್ಯಗಳನ್ನು ಒಳಗೊಂಡಿದೆ.

ಎರಡನೇ ಅಧ್ಯಾಯದಲ್ಲಿ 'ತುಳು ನಾಟಕ ಪರಂಪರೆ' ಎನ್ನುವ ಶೀರ್ಷಿಕೆಯ ಅಡಿಯಲ್ಲಿ ತುಳು ಜನಪದ ರಂಗಭೂಮಿ; ಧಾರ್ಮಿಕ ರಂಗಭೂಮಿ, ಕರಾವಳಿ ಯಕ್ಷಗಾನ ಮತ್ತು ತುಳು ರಂಗಭೂಮಿಯ ಸಾಮ್ಯತೆಗಳು, ತುಳು ನಾಟಕದ ಹುಟ್ಟು ಮತ್ತು ಪ್ರಾಚೀನತೆ, ವಸಾಹತು ಪೂರ್ವ ತುಳು ರಂಗಭೂಮಿ, ವಸಾಹತೋತ್ತರ ತುಳು ರಂಗಭೂಮಿ, ಆಧುನಿಕ ತುಳು ರಂಗಭೂಮಿ, ತುಳು ರಂಗಭೂಮಿಗೆ ಹಾಸ್ಯ ನಾಟಕಗಳ ಹೊಸ ಆಯಾಮ, ತುಳುರಂಗಭೂಮಿ; ಕಲಾ ಪೋಷಕರು ಎಂದು ವಿಭಾಗಿಸಿಕೊಂಡು ಚರ್ಚಿಸಲಾಗಿದೆ.

ಈ ಅಧ್ಯಾಯದಲ್ಲಿ ಕರಾವಳಿಯ ತುಳುರಂಗಭೂಮಿಯ ಆರಂಭದ ಹಿನ್ನೆಲೆ, ಐತಿಹಾಸಿಕ ಮಹತ್ವ, ಇತರ ರಂಗ ಪ್ರಕಾರಗಳೊಂದಿಗಿನ ಅಂತರ್‌ಸಂಬಂಧ, ತುಳು ಭಾಷೆ ಮತ್ತು ಇತರ ಭಾಷೆಗಳು ಮತ್ತು ಅವುಗಳ ಸಾಹಿತ್ಯದ ಪ್ರಭಾವ ಮತ್ತು ತುಳು ರಂಗಭೂಮಿಯ ಸಾಧಕರ ಕುರಿತಾಗಿ ಚರ್ಚಿಸಲಾಗಿದೆ. ಇದೇ ಸಂದರ್ಭದಲ್ಲಿ ತುಳು ಭಾಷೆಯಲ್ಲಿ ನಾಟಕಗಳನ್ನು ಬರೆಯುತ್ತಿದ್ದ ನಾಟಕಕಾರರ ಸಾಮಾಜಿಕ ಕಾಳಜಿ ತಮ್ಮ ನಾಟಕಗಳಲ್ಲಿ ಒಡಮೂಡಿರುವ ಬಗೆಯನ್ನು ವಿಶ್ಲೇಷಿಸಲಾಗಿದೆ. ಹಿರಿಯ ರಂಗಕರ್ಮಿಗಳು ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡ ಭಾಷೆಯ ನಿರೂಪಣಾ ಶೈಲಿ, ವಾಕ್‌ಚಾತುರ್ಯ, ಭಾಷಿಕ ಸ್ವರೂಪ, ರಂಗಭೂಮಿಗೆ ಪ್ರೋತ್ಸಾಹ ನೀಡಿದ ಸಂಘ ಸಂಸ್ಥೆಗಳು, ಮಹನೀಯರ ಕುರಿತು ಚರ್ಚಿಸಲಾಗಿದೆ.

ತುಳು ರಂಗಭೂಮಿಗೆ ಇಲ್ಲಿನ ಆರಾಧನ ಪರಂಪರೆಯ ಪ್ರಭಾವವಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಕರಾವಳಿ ಗಂಡುಕಲೆಯಾದ ಯಕ್ಷಗಾನದ ಭಾಷಾ ಸೊಗಡು ತುಳು ನಾಟಕ ಮತ್ತು ಸಿನೆಮಾಗಳಲ್ಲಿ ಪಡಿಮೂಡಿದೆ. ನಾಟಕ ಕಲಾವಿದರು ಮತ್ತು ಸಿನಿಮಾ ನಿರ್ದೇಶಕರು ಈ ನೆಲೆಯಲ್ಲಿ ವಿಶೇಷ ಆಸ್ಥೆ ವಹಿಸಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಜಾಗತಿಕ ಮಟ್ಟದ ನಾಟಕ ಸಿನಿಮಾಗಳ ಪ್ರಭಾವ

ತುಳುವಿನ ಎರಡೂ ಕಲಾ ಪ್ರಕಾರಗಳಲ್ಲಿ ಒಡಮೂಡಿರುವುದು ಕಂಡುಬಂದಿದೆ. **ಹಾಸ್ಯ ಮಿಶ್ರಿತ ಸಂಭಾಷಣೆ ತುಳು ರಂಗಭೂಮಿ ಮತ್ತು ಸಿನೆಮಾಗಳ ಜೀವಾಳವಾಗಿದೆ**.

ಮೂರನೇ ಅಧ್ಯಾಯ 'ತುಳು ಸಿನಿಮಾರಂಗ: ಆರಂಭದ ಹೆಜ್ಜೆ ಗುರುತು' ಎಂಬ ಶೀರ್ಷಿಕೆಯಲ್ಲಿ ಕರ್ನಾಟಕದಲ್ಲಿ ಸಿನಿಮಾರಂಗದ ಆರಂಭ, ತುಳು ಸಿನಿಮಾರಂಗ: ಆರಂಭದ ಘಟ್ಟ, ತುಳು ಸಿನಿಮಾರಂಗ: ಪ್ರಭಾವ ಮತ್ತು ಪ್ರೇರಣೆ, ತುಳುನಾಡಿನಲ್ಲಿ ಚಲನಚಿತ್ರ ಮಂದಿರಗಳು ಕುರಿತು ವಿಶ್ಲೇಷಿಸಲಾಗಿದೆ. ತುಳು ರಂಗಭೂಮಿಯಲ್ಲಿ ಪಳಗಿದ ಕಲಾವಿದರು ಮತ್ತು ನಾಟಕ ರಚನೆಕಾರರ ಅವಿಶ್ರಾಂತ ಪರಿಶ್ರಮದ ಫಲವಾಗಿ ತುಳು ಸಿನಿಮಾ ಇಂದು ಜಾಗತಿಕವಾಗಿ ತೆರೆದುಕೊಳ್ಳುವುದಕ್ಕೆ ಸಾಧ್ಯವಾಗಿದೆ. ದೇಶೀಯ ಭಾಷೆಗಳಲ್ಲಿನ ಸಿನಿಮಾಗಳ ಪಡಿಛಾಯೆ ತುಳು ಸಿನಿಮಾಗಳಲ್ಲಿಯೂ ಕಂಡುಬರುತ್ತದೆ. ಮುಖ್ಯವಾಗಿ ಹಿಂದಿ, ತಮಿಳು ಹಾಗು ಮಲಯಾಳಂ ಭಾಷೆಗಳ ಪ್ರಭಾವ ತುಳು ಸಿನಿಮಾಕ್ಷೇತ್ರವನ್ನು ಹೆಚ್ಚು ಅವಲಂಬಿಸಿಕೊಂಡಿದೆ. ಆಧುನಿಕ ತಂತ್ರಜ್ಞಾನಗಳ ಬೆಳವಣಿಗೆಯಿಂದಾಗಿ ಕರಾವಳಿಯ ಚಿತ್ರಮಂದಿರಗಳು ಬದಲಾವಣೆಯನ್ನು ತಂದುಕೊಂಡರೆ ಮತ್ತೆ ಕೆಲವು ವಾಣಿಜ್ಯ ರೂಪದ ಸಂಕೀರ್ಣಗಳಾಗಿ ಸ್ಥಿತ್ಯಂತರಗೊಳ್ಳುತ್ತಿವೆ.

ಈ ಅಧ್ಯಾಯದಲ್ಲಿ ತುಳು ಸಿನಿಮಾ ಕ್ಷೇತ್ರದ ಕಟ್ಟಿ ಬೆಳೆಸಿದ ನಾಡಿನ ಕಲಾಪ್ರೇಮಿಗಳ ವಿವರಗಳನ್ನು ಚರ್ಚಿಸಲಾಗಿದೆ. **ಪಾರಂಪರಿಕ ರಂಗ ಪ್ರಕಾರವೊಂದರ ಕಲಾವಿದರು ಆಧುನಿಕ ರಂಗ ಪ್ರಯೋಗದ ಸೊಬಗಿಗೆ ಬೆರಗಾಗಿ ಅದರ ಮಾದರಿಯನ್ನು ತಮ್ಮ ಭಾಷೆಯಲ್ಲಿಯೂ ಸೃಜಿಸುವ ಹಂಬಲದಿಂದ ಪ್ರಯತ್ನಿಸಿದರು. ಆರಂಭದ ಯತ್ನ ಯಶಸ್ಸನ್ನು ತಂದುಕೊಟ್ಟ ಕಾರಣದಿಂದ ತುಳು ನಾಟಕಕಾರರ ತಂಡ ತುಳು ಸಿನಿಮಾ ಕ್ಷೇತ್ರದ ನಿರ್ಮಾಣಕ್ಕೆ ತೊಡಗಿಸಿಕೊಂಡಿತು. ಹಿರಿಯ ಕಿರಿಯ ಕಲಾವಿದರು ಬೆರೆತು ಬೆಳೆಸಿದ ತುಳು ಸಿನಿಮಾ ಕ್ಷೇತ್ರ ಹೊಸತನದೊಂದಿಗೆ ಚಾರಿತ್ರಿಕ ದಾಖಲೆಯನ್ನೇ ನಿರ್ಮಿಸಿತು**.

ಸಾಮಾಜಿಕ, ಐತಿಹಾಸಿಕ, ಧಾರ್ಮಿಕ ಹಿನ್ನಲೆಯಲ್ಲಿ ಮೂಡಿಬಂದ ಸಿನಿಮಾಗಳು ಜನರ ಮನಸ್ಸನ್ನು ಮುದಗೊಳಿಸಿತ್ತಲ್ಲದೆ ಸಿನಿಮಾ ನಿರ್ಮಾಪಕರಿಗೆ ಹೊಸ ಹುರುಪು ತಂದುಕೊಟ್ಟಿತ್ತು. ತುಳು ಸಿನಿಮಾದಿಂದಾಗಿ ಸಾಹಿತ್ಯ, ಸಂಗೀತ, ಭಾಷೆ, ಪ್ರಾದೇಶಿಕತೆಗಳಿಗೆ ಜೀವಂತಿಕೆ ಕೂಡಿಬಂತು.

ಅಧ್ಯಾಯ ನಾಲ್ಕರಲ್ಲಿ 'ತುಳು ನಾಟಕ ಆಧಾರಿತ ಸಿನಿಮಾ: ಪ್ರೇರಣೆ ಮತ್ತು ಅನನ್ಯತೆ' ಎಂದು ಹೆಸರಿಸಿ ತುಳು ನಾಟಕಗಳಿಂದ ಪ್ರೇರಣೆ ಪಡೆದ ಸಿನಿಮಾಗಳ ಕುರಿತು ಚರ್ಚಿಸಲಾಗಿದೆ. ತುಳು ಸಿನಿಮಾಗಳ ಕಥಾ ಸನ್ನಿವೇಶಗಳಿಗೂ ತುಳುಭಾಷೆಯ ನಾಟಕಗಳ ಕಥಾ ಸಾಹಿತ್ಯಕ್ಕೂ ಒಂದಕ್ಕೊಂದು ಸಂಬಂಧವಿದೆ. ಹೆಚ್ಚಿನ ತುಳು ಸಿನಿಮಾಗಳಲ್ಲಿ ತುಳುನಾಟಕಗಳ ಗಂಭೀರ ಪ್ರಭಾವವನ್ನು ಗುರುತಿಸಬಹುದಾಗಿದೆ.

ತುಳು ಸಿನಿಮಾ ರಂಗದ ಆರಂಭದ ಕಾಲಘಟ್ಟದಿಂದ ಹಿಡಿದು ಪ್ರಸ್ತುತ ಕಾಲಘಟ್ಟದ ವರೆಗಿನ ಒಟ್ಟು ವಿಚಾರಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. **ರಂಗಭೂಮಿಯಲ್ಲಿ ಪ್ರಯೋಗಗೊಂಡು ಜನಪ್ರಿಯತೆ ಪಡೆದ ನಾಟಕಗಳು ತುಳು ಸಿನಿಮಾದಲ್ಲಿ ಹೆಚ್ಚು ಆಕರ್ಷಣೆಗೆ ಒಳಗಾಗಿ ಜನರ ಮನಸ್ಸನ್ನು ಸೂರೆಗೊಂಡವು. ಅಲ್ಲಿಯ ವರೆಗೆ ಮುಂಬಯಿ, ಮದ್ರಾಸ್, ಬೆಂಗಳೂರು ಮುಂತಾದ ಮಹಾ ನಗರಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಹೊಸ ಮಾದರಿಯ ಕಲಾಪ್ರಕಾರ ತುಳುನಾಡಿನ ನಾಟಕಕಾರರ ಸರ್ವ ಪ್ರಯತ್ನದಿಂದ ಕರಾವಳಿ ಜನರ ಬಹುಬೇಡಿಕೆಯ ಕಲೆಯಾಗಿ ಮೂಡಿಬಂತು.**

ಸಾಮಾಜಿಕ ಜಾಗೃತಿ, ವಿಡಂಬನೆಯ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಕಳಕಳಿ, ಚಾರಿತ್ರಿಕ ಮಹತ್ವ, ಭಕ್ತಿ, ಸಾಂಸಾರಿಕ ಜೀವನ, ದಾಂಪತ್ಯದ ಪಾವಿತ್ರ್ಯತೆ, ಶೀಲ–ಅಶ್ಲೀಲ ಮುಂತಾದ ವಿಚಾರಗಳು ತುಳು ಸಿನಿಮಾದಲ್ಲಿ ಹೆಚ್ಚು ಪ್ರತಿಫಲನಗೊಳ್ಳುತ್ತಿರುವುದು ವಿಶೇಷ ಸಂಗತಿಯಾಗಿದೆ.

ಐದನೇ ಅಧ್ಯಾಯದಲ್ಲಿ 'ತುಳು ನಾಟಕ ಮತ್ತು ಸಿನೆಮಾಗಳು: ಸಾಮಾಜಿಕ ಹಾಗೂ ಐತಿಹಾಸಿಕ ಕಥನಗಳ ಪ್ರೇರಣೆ ಮತ್ತು ಅನನ್ಯತೆ' ಎಂಬ ಅಧ್ಯಾಯದಲ್ಲಿ ಎಂದು ಸಾಮಾಜಿಕ ಕಥನಗಳ ಪ್ರೇರಣೆ ಮತ್ತು ಅನನ್ಯತೆ, ಪ್ರಾದೇಶಿಕ ವಸ್ತು ಪ್ರತಿಪಾದನೆ, ಸಾಮಾಜಿಕ ನಾಟಕ ಮತ್ತು ಸಿನಿಮಾಗಳು: ವಿಡಂಬನೆಯ ನೆಲೆ, ಐತಿಹಾಸಿಕ ಕಥನಗಳ ಪ್ರೇರಣೆ ಮತ್ತು ಅನನ್ಯತೆ, ತುಳು ನಾಟಕ; ಸಿನಿಮಾ: ಸಾಂಸ್ಕೃತಿಕ ಅನನ್ಯತೆ, ರಂಗಕಲೆಗಳಲ್ಲಿ ಆರಾಧನಾ ಪರಂಪರೆ ಎಂದು ವಿಂಗಡಿಸಿ ಚರ್ಚಿಸಲಾಗಿದೆ.

ತುಳು ನಾಟಕ ಮತ್ತು ಸಿನೆಮಾಗಳು ತುಳುನಾಡಿನ ಪ್ರಾದೇಶಿಕ ವೈಶಿಷ್ಟ್ಯದ ಮೇಲೆ ನಿರೂಪಿತವಾಗಿದೆ. ತುಳುನಾಡಿನ ಕಲೆ–ಕ್ರೀಡೆ–ನಂಬಿಕೆ ಮತ್ತು ಆಚರಣೆಗಳು ಅತ್ಯಂತ ವೈವಿಧ್ಯಪೂರ್ಣವಾದುದು. ಅನೇಕ ವಿಚಾರಗಳು ಸಾರ್ವತ್ರಿಕವಾದ ಕೆಲವೊಂದು ಸಮಾನ ಅಂಶಗಳನ್ನು ಒಳಗೊಂಡಿರುತ್ತದೆ. ತುಳುನಾಡ ಆಚಾರ–ವಿಚಾರಗಳು, ಕಲೆ ಇವುಗಳು ಬೇರೆ ಬೇರೆ ಸಂದರ್ಭದಲ್ಲಿ ಬಳಕೆಯಾಗುವಂತಹುಗಳು. ಇವುಗಳಲ್ಲಿ ಸಾದೃಶ್ಯತೆ

ಕಂಡುಬರುತ್ತದೆ. ಇವುಗಳನ್ನು ಇಲ್ಲವೆಂದು ತಿರಸ್ಕರಿಸಲು ಸಾಧ್ಯವಿಲ್ಲ. ಈ ನಡುವೆಯೂ ಎದ್ದು ಕಾಣಿಸುವಂತಹ ಹಲವು ವಿಚಾರಗಳು ಅನನ್ಯತೆ ಎಂದು ಗುರುತಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ತುಳು ನಾಟಕ ಮತ್ತು ಸಿನೆಮಾಗಳು: ಸಾಹಿತ್ಯ, ಸಂಗೀತ, ಭಾಷಿಕ ಅನನ್ಯತೆ ಎಂಬ ಮುಖ್ಯ ವಿಷಯದಲ್ಲಿ ತುಳು ನಾಟಕ ಮತ್ತು ಸಿನೆಮಾಗಳಲ್ಲಿ ಸಾಹಿತ್ಯ, ತುಳು ಭಾಷೆಯ ನಾಟಕ ಮತ್ತು ಸಿನೆಮಾಗಳಲ್ಲಿ ಗೀತ ಸಾಹಿತ್ಯ, ತುಳು ಭಾಷೆಯ ನಾಟಕ ಮತ್ತು ಸಿನೆಮಾಗಳ ಭಾಷಿಕ ಸ್ವರೂಪ, ತುಳು ಭಾಷೆಯ ನಾಟಕಗಳ ಸ್ವರೂಪ, ತುಳು ಭಾಷೆಯ ನಾಟಕಗಳಲ್ಲಿ ವಿಡಂಬನೆ, ತುಳು ಸಿನೆಮಾಗಳ ಸ್ವರೂಪ, ತುಳು ಸಿನೆಮಾಗಳಲ್ಲಿ ಬಳಕೆಯಾದ ಗಾದೆ ಮಾತುಗಳು ಮುಂತಾದ ವಿಚಾರಗಳನ್ನು ವಿವರಿಸಲಾಗಿದೆ.

ತುಳು ಭಾಷೆಯಲ್ಲಿ ಜನಪದ ಸಂಪತ್ತು ಹೇರಳವಾಗಿದೆ. **ಸಿರಿ ಪಾಡ್ದನ, ಕೋಟಿ ಚೆನ್ನಯ ಪಾಡ್ದನ ಸೇರಿದಂತೆ ಬೇರೆ ಬೇರೆ ದೈವಗಳ ಇತಿಹಾಸವನ್ನು ಹೇಳುವ ಪಾಡ್ದನಗಳಿವೆ. ಅಲ್ಲದೆ ಕರಾವಳಿ ಪ್ರಾದೇಶಿಕತೆಯಲ್ಲಿ ತನ್ನದೇ ಆದ ವೈಶಿಷ್ಟ್ಯವಾದ ಜನಪದ ಕಲೆಗಳಿವೆ. ಈ ಜನಪದ ಸಾಹಿತ್ಯ ಸಂಪತ್ತಿನ ಭಾಷೆಯು ತನ್ನದೇ ಆದ ಅಸ್ಮಿತೆಯನ್ನು ಹೊಂದಿದೆ. ಮುಖ್ಯವಾಗಿ ಇಲ್ಲಿ ತುಳುವಿನ ಮೂಲ ಸ್ವರೂಪನ್ನು ಗುರುತಿಸಲು ಸಾಧ್ಯವಾಗುತ್ತದೆ. ಆಧುನಿಕ ಸಂದರ್ಭದಲ್ಲಿ ಬೇರೆ ಬೇರೆ ಭಾಷೆಗಳ ಮುಖ್ಯವಾಗಿ ಕನ್ನಡ ಭಾಷೆಯ ಪ್ರಭಾವದಿಂದ ಅನೇಕ ಪದಗಳು ತುಳು ಭಾಷಾ ಭಂಡಾರವನ್ನು ಸೇರಿವೆ. ಈ ಎಲ್ಲದರ ನಡುವೆಯೂ ತುಳುವಿನಲ್ಲೂ ಇರುವ ಗಾದೆಗಳು, ನುಡಿಗಟ್ಟುಗಳು, ಆ ಪ್ರದೇಶಕ್ಕೆ ವಿಶಿಷ್ಟವಾದ ಕೆಲವೊಂದು ಬಂಧುವಾಚಕ, ಕೃಷಿ, ಆಚರಣೆಗಳಿಗೆ ಸಂಬಂಧಿತ ಪದಗಳು ಗಮನಾರ್ಹವಾಗಿದೆ.**

ತುಳು ಭಾಷೆಯ ಸಿನಿಮಾಗಳ ಹಾಡುಗಳಲ್ಲಿ ಮತ್ತು ಸಿನಿಮಾದ ಪೀಠಿಕಾ ಭಾಗದಲ್ಲಿ **ತುಳುನಾಡಿನ ಭೌಗೋಳಿಕ ಸೌಂದರ್ಯವನ್ನು ತೋರಿಸುವುದು ಪರಿಪಾಠವಾಗಿದೆ. ಕರಾವಳಿಯ ಹಿನ್ನೀರು ಪ್ರದೇಶ, ಕಡಲ ಕಿನಾರೆ, ಮೈದಾನಗಳು, ಭತ್ತದ ಪೈರಿನ ಗದ್ದೆಗಳು, ತೆಂಗಿನ ತೋಟ, ಅಡಿಕೆ ತೋಟ ಹಾಗೂ ಇಲ್ಲಿನ ಅರಣ್ಯ ಪ್ರದೇಶವನ್ನೂ, ವನ್ಯಸಂಪತ್ತುಗಳನ್ನೂ ಹಿನ್ನೆಲೆಯಾಗಿಟ್ಟು ಚಿತ್ರೀಕರಣ ಮಾಡುವುದು ಸಹಜವಾಗಿದೆ.**

ತುಳುನಾಡಿನ ಅಸ್ಮಿತೆ, ಅನನ್ಯತೆಗಳನ್ನು ತುಳು ಸಿನಿಮಾಗಳಲ್ಲಿ ಅಭಿವ್ಯಕ್ತಿಗೊಳಿಸಲಾಗಿದೆ ಎಂಬುವುದನ್ನು ಅಧ್ಯಯನದ ಸಂದರ್ಭದಲ್ಲಿ ಗುರುತಿಸಲಾಗಿದೆ.

ತುಳುನಾಡಿನ ವಿಶಿಷ್ಟವಾದ ಭೌಗೋಳಿಕತೆ, ನಂಬಿಕೆ, ಆಚರಣೆ, ಭಾಷೆ, ಜನಜೀವನ, ಆಹಾರ ಪದ್ಧತಿ ಇವೆಲ್ಲವನ್ನು ತುಳು ಸಿನೆಮಾಗಳು ಒಂದಲ್ಲ ಒಂದು ರೀತಿಯಲ್ಲಿ ತೆರೆಯ ಮೇಲೆ ತಂದಿವೆ. ಕಥೆಗೆ ಪೂರಕವಾಗಿ ಕೆಲವೊಮ್ಮೆ ತುಳುನಾಡಿನ ಭಿನ್ನತೆಯೇ ಕಥಾ ವಸ್ತುವಾಗಿ ಪ್ರೇಕ್ಷಕರನ್ನು ರಂಜಿಸಿವೆ. ತುಳು ಸಿನೆಮಾಗಳು ತುಳು ಮಣ್ಣಿನ ಸಂಸ್ಕೃತಿಯ ಉಳಿವಿಗೆ ಮತ್ತು ಅರಿವಿಗೆ ಈ ಮೂಲಕ ತನ್ನ ಕೊಡುಗೆಯನ್ನು ನೀಡಿದೆ.

ಅಧ್ಯಾಯ ಏಳರಲ್ಲಿ ಅಧ್ಯಯನದ ಸಮಾರೋಪ ಮತ್ತು ಸಂಶೋಧನೆಯಲ್ಲಿ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ.

ನಾಟಕ, ಸಿನೆಮಾಗಳಂತಹ ಜನಪ್ರಿಯ ಮಾಧ್ಯಮಗಳ ಕುರಿತಂತೆ ಅಧ್ಯಯನಗಳು ನಡೆಯುತ್ತಿರುವುದು ವಿರಳ. ನಾಟಕ ಮತ್ತು ಸಿನೆಮಾಗಳು ಈಗಾಗಲೇ ಬಹುಜನರನ್ನು ಆಕರ್ಷಿಸಿದ ಕಲಾಮಾಧ್ಯಮವಾಗಿದೆ. ಆಧುನಿಕ ಸಂದರ್ಭದಲ್ಲಿ ನಾಟಕ ಹಾಗೂ ಸಿನೆಮಾಗಳ ಮಾಧ್ಯಮದ ಶಕ್ತಿ ಹಿಂದಿಗಿಂತಲೂ ಅಪಾರವಾಗಿದೆ. ನಾಟಕಗಳಂತೆ ಸಿನಿಮಾ ಕ್ಷೇತ್ರವೂ ನಮ್ಮ ಸಮುದಾಯ, ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಅನೇಕ ರೀತಿಯಲ್ಲಿ ನೆರವಾಗುತ್ತವೆ. ಈ ಕೆಲಸವನ್ನು ಚಲನಚಿತ್ರ ಶಿಬಿರಗಳು, ಚಲನಚಿತ್ರೋತ್ಸವ, ಕಾರ್ಯಗಾರಗಳು ಮಾಡುತ್ತಾ ಬಂದಿವೆ. ಇದರ ಜೊತೆಜೊತೆಗೆ ಶೈಕ್ಷಣಿಕ ವಲಯ ಈಗಾಗಲೆ ಅತ್ಯಂತ ಪರಿಣಾಮಕಾರಿಯಾಗಿ ತನ್ನ ಅಧ್ಯಯನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. **ಚಲನಚಿತ್ರ ಮಾಧ್ಯಮ ಅಧುನಿಕ ಜಗತ್ತಿನಲ್ಲಿ ಮಾಯಾಮಾಧ್ಯಮವಾಗಿ ವಿಜೃಂಭಿಸುತ್ತಿದೆ. ಚಲನಚಿತ್ರ ಮಾಧ್ಯಮ ಭಾಷಾ ಗಡಿಯನ್ನು ಮೀರಿ ಬೆಳೆದಿರುವುದು ಹೆಮ್ಮೆಯ ಸಂಗತಿಯಾಗಿದೆ. ತುಳು ಚಲನಚಿತ್ರರಂಗಕ್ಕೆ ಇತ್ತೀಚೆಗೆ ಐವತ್ತು ವರ್ಷಗಳು ತುಂಬಿದೆ. ಕಳೆದ ಐದು ದಶಕಗಳಲ್ಲಿ ತುಳು ಚಲನಚಿತ್ರರಂಗ ತುಳುನಾಡಿನ ಮತ್ತು ಹೊರನಾಡಿನ ತುಳುಜನರ ಭಾವನೆಗಳ ಪ್ರತಿಬಿಂಬವಾಗಿ ಬೆಳೆದಿದೆ.**

ಅಧ್ಯಯನದ ಫಲಿತಗಳು

- ತುಳುನಾಡು ತೀರಪ್ರದೇಶ ಮತ್ತು ಮಲೆನಾಡು ಪರಿಸರಗಳಿಂದ ಆವೃತವಾಗಿದ್ದು ವೈಶಿಷ್ಟ್ಯಪೂರ್ಣವಾದ ಜನಜೀವನ, ಆಹಾರ ಸಂಸ್ಕೃತಿ, ನಂಬಿಕೆ, ಆಚರಣೆ,

ಆರಾಧನೆಗಳು, ಜನಪದ ಕಲಾ ವೈವಿಧ್ಯಗಳ ಮೂಲ ಸೆಲೆಯಾಗಿದೆ. ಈ ಪ್ರಾದೇಶಿಕ ಭಿನ್ನತೆಗಳು ತುಳು ನಾಟಕ ಹಾಗೂ ಸಿನಿಮಾಗಳ ಪ್ರೇರಣೆಗೆ ನಾಂದಿಯಾಗಿದೆ. ಅಲ್ಲದೇ ಇಲ್ಲಿನ ಪ್ರಾಕೃತಿಕ ವೈಶಿಷ್ಟ್ಯಗಳನ್ನು ಬಳಸಿಕೊಂಡು ಮೂಡಿಬಂದಿರುವ ತುಳು ಭಾಷೆಯ ನಾಟಕ ಮತ್ತು ಸಿನಿಮಾಗಳು ಸಾಂಸ್ಕೃತಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ತುಳುನಾಡಿನ ಸಂಸ್ಕೃತಿಗೆ ಮನ್ನಣೆ ದೊರೆಯುವಂತಾಗಿದೆ.

- ಅಸಂಖ್ಯಾತ ತುಳುನಾಟಕಗಳ ರಚನೆಯ ಹಿಂದೆ ಪ್ರದರ್ಶನದ ಉದ್ದೇಶ ಒಂದೇ ಮಾತ್ರವಾಗಿತ್ತು. ಒಂದು ಕಾಲಘಟ್ಟದಲ್ಲಿ ಉತ್ತಮ ಸಾಹಿತ್ಯ ಹೊಂದಿದ್ದ ನಾಟಕಗಳಿಗೆ ಮಾತ್ರ ಯಶಸ್ವಿ ಪ್ರದರ್ಶನದ ಮನ್ನಣೆ ದೊರೆಯುತ್ತಿತ್ತು. ತುಳುರಂಗಭೂಮಿ ಕಲಾವಿದರಿಂದಲೇ ತುಳು ಸಿನಿಮಾ ಕ್ಷೇತ್ರವು ವಿಕಾಸಗೊಂಡು ತುಳುನಾಟಕಗಳ ಕಥಾ ಸನ್ನಿವೇಶಗಳೇ ಮುಂದೆ ಚಿತ್ರಮಂದಿರಗಳಲ್ಲಿ ತೆರೆಕಂಡು ಜನಾಕರ್ಷಣೆಗೆ ಪಡೆದುಕೊಂಡಿತು.
- ಈ ಎರಡೂ ಕಲಾಪ್ರಕಾರಗಳಲ್ಲಿಯೂ ಪ್ರತಿ ಕಾಲಘಟ್ಟದಲ್ಲಿ ಸ್ಥಿತ್ಯಂತರಗಳು ನಡೆಯುತ್ತಾ ಬಂದಿದೆ. ತುಳುರಂಗಭೂಮಿಯಲ್ಲಿನ ಗಂಭೀರ ನಾಟಕಗಳ ಸ್ವರೂಪಗಳು ಬದಲಾಗುತ್ತಾ ವಿಡಂಬನೆಯ ಪ್ರಹಸನ ರೂಪದತ್ತ ಹೊರಳಿಕೊಂಡಿತ್ತು. ಈ ಮಾದರಿಯ ಪಲ್ಲಟ ಕಾಲಘಟ್ಟಕ್ಕನುಸಾರವಾಗಿ ತುಳು ಸಿನಿಮಾಗಳಲ್ಲಿಯೂ ನಡೆದಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ತುಳುಭಾಷೆಯಲ್ಲಿ ಮೂಡಿಬಂದ ಗಂಭೀರ ಮತ್ತು ವಿಡಂಬನೆಯಂತಹ ನಾಟಕ, ಸಿನಿಮಾಗಳು ತುಳು ಭಾಷೆ, ಸಂಸ್ಕೃತಿಗೆ ವಿಶೇಷ ಕೊಡುಗೆಗಳನ್ನು ನೀಡುತ್ತಾ ಬಂದಿವೆ.
- ತುಳುನಾಡಿನ ಜನಜೀವನದಲ್ಲಿ ಅನೇಕ ಸಮುದಾಯ ಮತ್ತು ಬಹು ಭಾಷೆಗಳು ಹಾಸುಹೊಕ್ಕಾಗಿದೆ. ಈ ಮಾದರಿಯ ಸಮುದಾಯ ಮತ್ತು ಭಾಷೆಯ ಸೌಹಾರ್ದತೆಯೇ ತುಳುವಿನ ಪ್ರಾದೇಶಿಕತೆಯ ವೈಶಿಷ್ಟ್ಯವಾಗಿದೆ. ಈ ಹಿನ್ನೆಲೆಯಲ್ಲಿ ತುಳು ನಾಟಕ ಮತ್ತು ಸಿನಿಮಾಗಳಲ್ಲಿ ಅನ್ಯಭಾಷೆಯ ಸೊಗಸು ಮತ್ತು ಸೊಗಡು ಅಭಿವ್ಯಕ್ತಿಗೊಂಡಿದೆ.
- ತುಳು ನಾಟಕ ಮತ್ತು ಸಿನಿಮಾಗಳಲ್ಲಿ ಪ್ರಾದೇಶಿಕವಾದ ಅನೇಕ ಸ್ವರೂಪಗಳನ್ನು ನಿರ್ಮಾಣ ಮಾಡಲಾಗಿದೆ. ನಾಟಕಗಳಲ್ಲಿ ಆಧುನಿಕತೆಯ ರಂಗಪ್ರಯೋಗ, ಸಿನಿಮಾಗಳಲ್ಲಿ ವಿಭಿನ್ನ ಸನ್ನಿವೇಶಗಳ ನಿರ್ಮಾಣ, ಕಲೆ, ಸಂಸ್ಕೃತಿ, ನಂಬಿಕೆ,

ಆಚರಣೆ, ಭೌಗೋಳಿಕತೆಗಳನ್ನು ಸಂಪೂರ್ಣ ಬಳಸಿಕೊಳ್ಳುವ ಮೂಲಕ ಎರಡೂ ಕಲಾಪ್ರಕಾರಗಳಲ್ಲಿಯೂ ಅನನ್ಯತೆಯನ್ನು ಗಮನಿಸನಹುದಾಗಿದೆ.

- ತುಳುನಾಡಿನ ಸಾಂಸ್ಕೃತಿಕ ಪರಂಪರೆಯ ಆಶಯ ತುಳು ನಾಟಕ ಮತ್ತು ಸಿನಿಮಾಗಳಲ್ಲಿ ಕಾಣಬಹುದಾಗಿದೆ. ನಾಟಕ, ಸಿನಿಮಾಗಳ ನಿರ್ದೇಶಕರು ಪ್ರದರ್ಶನಗಳಿಗೆ ವಸ್ತುವಿನ ಆಯ್ಕೆಯ ಸಂದರ್ಭದಲ್ಲಿ ಪ್ರಾದೇಶಿಕತೆ, ತುಳುನಾಡಿನ ಸಂಸ್ಕೃತಿ, ಸಮುದಾಯ, ಪಾರಂಪರಿಕ ವೃತ್ತಿ, ಬದುಕು, ಆಚರಣೆ, ಆರಾಧನೆ ಮುಂತಾದ ವೈಚಾರಿಕತೆಗಳನ್ನು ಪ್ರತಿನಿಧಿಸುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ.
- ತುಳು ನಾಟಕ ಮತ್ತು ಸಿನಿಮಾಗಳಿಗೆ ತುಳುನಾಡಿನ ಜನಪದ ಮೌಖಿಕ ಆಕರಗಳು ವಸ್ತುವಾಗಿದೆ. ಆ ಮೂಲಕ ಈ ಎರಡೂ ಕಲಾ ಪ್ರಕಾರಗಳು ಜನಪದ ವಸ್ತುವನ್ನು ಆಯ್ಕೆ ಮಾಡಿಕೊಂಡು ನಿರ್ಮಾಣಗೊಳ್ಳುತ್ತಿವೆ.
- ಐತಿಹಾಸಿಕ ಕಥಾಸನ್ನಿವೇಶಗಳು ನಾಟಕ ಮತ್ತು ಸಿನಿಮಾಗಳಿಗೆ ಮೂಲ ಪ್ರೇರಣೆಯನ್ನು ಒದಗಿಸಿಕೊಟ್ಟಿದೆ. ಚಾರಿತ್ರಿಕ ನೈಜ ಘಟನೆಗಳು, ಪೌರುಷ, ಸ್ವಾರ್ಥ, ಬಲಿದಾನ, ಧಾರ್ಮಿಕ ಪಾವಿತ್ರ್ಯತೆ, ಸಾಮಾಜಿಕ ಚಿತ್ರಣ, ರಾಜಕೀಯ ಧೋರಣೆ, ಅನ್ಯರ ಆಧಿಪತ್ಯ, ರಾಷ್ಟ್ರೀಯತೆ, ನಾಡು ನುಡಿಯ ಸ್ವಾಭಿಮಾನ, ಸ್ವಾತಂತ್ರ್ಯ ಹೋರಾಟ ಇತ್ಯಾದಿ ವಿಚಾರಗಳು ಈ ಕಾಲ ಪ್ರಕಾರಗಳು ಪ್ರತಿನಿಧಿಸಿದೆ.
- ಶೈಕ್ಷಣಿಕವಾಗಿಯೂ ತುಳುನಾಟಕಗಳು ಮಹತ್ವವನ್ನು ಪಡೆದುಕೊಂಡಿದೆ. ಕನ್ನಡ ನಾಟಕಗಳ ಪ್ರೇರಣೆ ಇದೆ ಎನ್ನುವುದು ಶತಸಿದ್ಧ. ಆದರೆ ತುಳುನಾಟಕ ಈ ಹಾದಿಯನ್ನು ಮಾದರಿಯಾಗಿಟ್ಟುಕೊಂಡರೂ ಸಂಪೂರ್ಣವಾಗಿ ಕನ್ನಡ ರಂಗಭೂಮಿಯನ್ನು ಅನುಕರಿಸಿಲ್ಲ ಎನ್ನುವದು ಸ್ಪಷ್ಟ. ಜನರು, ಪ್ರದೇಶ, ಕಾಲದ ಹಿನ್ನೆಲೆ, ಅಭಿರುಚಿಗಳಿಗೆ ಪೂರಕವಾಗಿ ತುಳು ನಾಟಕಗಳು ರಚನೆಗೊಂಡಿವೆ.

  ಆದರೆ ತುಳುಭಾಷೆಯ ಸಿನಿಮಾದ ಹಿನ್ನೆಲೆಯನ್ನು ಗಮನಿಸಿದಾಗ ಭಾರತದ ಇತರ ಉದಾ: ಹಿಂದಿ, ತಮಿಳು, ಮರಾಠಿ, ಮಲಯಾಳಂ ಭಾಷೆಗಳ ಸಿನಿಮಾಗಳು ಹೆಚ್ಚು ಪ್ರಭಾವ ಬೀರಿವೆ ಎಂಬ ಅಂಶವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- ಕನ್ನಡ ನಾಟಕಗಳಲ್ಲಿರುವ ವ್ಯಾಪಕತೆ, ಕತೆಯ ಗಟ್ಟಿತನ, ಮನೋವಿಶ್ಲೇಷಣಾತ್ಮಕ ಅಂಶಗಳ ಕೊರತೆ ತುಳುಭಾಷೆಯ ನಾಟಕಗಳಲ್ಲಿ ಕಂಡು ಬಂದಿದೆ. ಬಹಳ

ಮುಖ್ಯವಾಗಿ ಕನ್ನಡ ಭಾಷೆಯೊಂದಿಗೆ ಸ್ಪರ್ಧಿಸದೆ ಹೊಂದಿಕೊಂಡು ಹೋಗುವ ಅಂಶವನ್ನು ತುಳುನಾಟಕಗಳಲ್ಲಿ ಕಾಣಬಹುದು. ಕನ್ನಡ ಸೇರಿದಂತೆ ಕೊಂಕಣಿ, ಮಲೆಯಾಳಂ, ಅರೆಭಾಷೆ, ಬ್ಯಾರಿ ಭಾಷೆ, ಹವ್ಯಕ ಭಾಷೆ ಸೇರಿದಂತೆ ಭಾಷಾ ವೈವಿಧ್ಯತೆಗಳಿಂದ ಕೂಡಿಕೊಂಡಿದೆ. ದಿನನಿತ್ಯ ಬಳಸುವ ಭಾಷೆಯ ಪದಗಳೇ ವಿಶೇಷವಾಗಿ ತುಳು ನಾಟಕಗಳ ಶೀರ್ಷಿಕೆಗಳಾಗಿವೆ. ಇವುಗಳೇ ಪ್ರೇಕ್ಷಕರನ್ನು ಸೆಳೆಯುವ ಅಂಶಗಳೆಂಬುದನ್ನು ಕಂಡುಕೊಳ್ಳಲಾಗಿದೆ. ಜನರ ಅಭಿರುಚಿಗಳಿಗೆ ಅನುಗುಣವಾಗಿ ನಿರಂತರವಾಗಿಯೂ ತುಳು ನಾಟಕಗಳು ರಚನೆಗೊಳ್ಳುತ್ತವೆ ಎನ್ನುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- ಆರಂಭದ ಕಾಲಘಟ್ಟದಲ್ಲಿ ತುಳು ಸಿನಿಮಾಗಳ ನಿರ್ದೇಶನ, ನಿರ್ಮಾಣ, ಸಂಗೀತ ಮತ್ತು ಇತರ ತಾಂತ್ರಿಕ ಸಹಕಾರಗಳಿಗೆ ಕನ್ನಡ ಮತ್ತು ತಮಿಳು ಸಿನಿಮಾ ವಲಯವನ್ನು (ಇಂಡಸ್ಟ್ರಿ) ಆಶ್ರಯಿಸಿದ ಪರಂಪರೆಯನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿದೆ. ಆದರೆ ತುಳುನಾಟಕಗಳಿಗೆ ಈ ಮಾದರಿಯ ಆಸರೆ ಕಂಡುಬರದೆ ಸ್ವತಂತ್ರ ಸ್ವರೂಪವನ್ನು ಪಡೆದು ಹಂತಹಂತವಾಗಿ ಬೆಳೆದಿರುವುದನ್ನು ಗಮನಿಸಲಾಗಿದೆ.
- ಸಮಕಾಲೀನ ವಿದ್ಯಮಾನಗಳಿಗೆ ತುಳುನಾಟಕ ಹಾಗು ತುಳುಚಿತ್ರರಂಗ ಪ್ರತಿಸ್ಪಂದಿಸಿದೆ. ಆ ಹಿನ್ನೆಲೆಯಲ್ಲಿ ಗಮನಿಸಿದಾಗ ಸಾಹಿತ್ಯದ ಧೋರಣೆಗಳು, ನಿಲುವುಗಳು ಈ ಎರಡೂ ಕಲಾ ಪ್ರಕಾರಗಳ ಮೇಲೆ ಮೇಲೆ ಪರಿಣಾಮ ಬೀರಿವೆ.
- ನಾಡು–ನುಡಿಯ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ಈ ಎರಡೂ ಕಲಾ ಪ್ರಕಾರಗಳು ತನ್ನ ವ್ಯಾಪ್ತಿಯಲ್ಲೇ ಕಲಾತ್ಮಕವಾಗಿ ಅಭಿವ್ಯಕ್ತಿಸಿವೆ.
- ಕೃಷಿ ಭೂಮಿಯ ಒತ್ತುವರಿ ಮತ್ತು ಪಾರಂಪರಿಕ ವ್ಯವಸಾಯಗಳು ನಾಶಹೊಂದುವಂತಹ ಗಂಭೀರ ಸಮಸ್ಯೆಗಳನ್ನು ನಾಟಕ ಮತ್ತು ಸಿನೆಮಾಗಳು ವಿಭಿನ್ನವಾಗಿ ತೋರಿಸಿಕೊಡುವಲ್ಲಿ ಸಫಲವಾಗಿದೆ. ತುಳುನಾಡಿನ ಮೂಲ ಸಂಸ್ಕೃತಿಯ ಪಲ್ಲಟ, ತುಳುನಾಡಿನ ಅನೇಕ ಪಾರಂಪರಿಕ ವೃತ್ತಿಗಳ ಕಣ್ಮರೆ ಪಾರಂಪರಿಕ ಕೃಷಿಯ ಲೋಪ, ಜಾನಪದ ಸ್ವರೂಪಗಳಲ್ಲಿನ ಬದಲಾವಣೆಗಳನ್ನು ರಂಗ ಮತ್ತು ಸಿನಿ ಪ್ರಯೋಗಗಳಲ್ಲಿ ಭಾಗಿಕವಾಗಿ ಪ್ರದರ್ಶನಗೊಳ್ಳುವುದು ವಾಡಿಕೆಯಾಗಿದೆ.

- ತುಳು ನಾಟಕ ಮತ್ತು ಸಿನಿಮಾಗಳು ಪ್ರಾದೇಶಿಕ ಮತ್ತು ಜಾಗತಿಕ ವಿದ್ಯಮಾನಗಳನ್ನು ಗ್ರಹಿಸಿಕೊಂಡು ಜನರಿಗೆ ವಾಸ್ತವ ವೈಚಾರಿಕತೆಗಳನ್ನು ತಲುಪಿಸುವಲ್ಲಿ ಸಫಲವಾಗಿದೆ.

ತುಳು ಸಿನೆಮಾರಂಗದ ಇತಿಹಾಸ ಮತ್ತು ಪರಂಪರೆಯನ್ನು ಗಮನಿಸಿದರೆ ಚಲನಚಿತ್ರ ಮಾಧ್ಯಮವನ್ನು ಅನೇಕ ಸಾಧಕರು ತಮ್ಮ ಪರಿಶ್ರಮ ಮತ್ತು ತ್ಯಾಗಗಳಿಂದ ಗಟ್ಟಿಯಾಗಿ ಬೆಳೆಸಿರುವುದು ತಿಳಿದು ಬರುತ್ತದೆ. ಬಂಡವಾಳಶಾಹಿ ವ್ಯವಸ್ಥೆ ಚಲನಚಿತ್ರರಂಗವನ್ನು ಲಾಭಗಳಿಕೆಯ ಸಾಧನವನ್ನಾಗಿ ಬಳಸಿಕೊಂಡಿದೆ. ರಾಜ್ಯ ವ್ಯವಸ್ಥೆ ಕೂಡ ಚಲನಚಿತ್ರ ಮಾಧ್ಯಮವನ್ನು ನಿಜವಾದ ಅರ್ಥದಲ್ಲಿ ಜನ ಮಾಧ್ಯಮವನ್ನಾಗಿ ಬೆಳೆಸುವ ನಿಟ್ಟಿನಲ್ಲಿ ನಿರ್ಣಾಯಕ ಕೊಡುಗೆ ನೀಡಿಲ್ಲ. ಚಲನಚಿತ್ರಗಳಲ್ಲಿ ಬಹು ಮುಖ್ಯವಾಗಿ ವ್ಯಾಪಾರಿ ಚಿತ್ರ ಮತ್ತು ಕಲಾತ್ಮಕ ಚಿತ್ರವೆಂಬ ಎರಡು ವರ್ಗಗಳನ್ನು ಕಾಣಬಹುದಾಗಿದೆ.

ಅಧ್ಯಯನ ಸಾಧ್ಯತೆಗಳು

ಚಲನಚಿತ್ರ ನಿರ್ಮಾಣ ಮೂಲಭೂತವಾಗಿ ಉದ್ಯಮಶೀಲತೆ ಮತ್ತು ಸೃಜನಶೀಲತೆಗಳನ್ನು ಒಳಗೊಂಡಿದೆ. ಅನೇಕ ಪ್ರತಿಭಾವಂತ ಸಾಹಿತಿಗಳು, ನಿರ್ದೇಶಕರು, ಕಲಾವಿದರು. ತಂತ್ರಜ್ಞರು ಮತ್ತಿತರ ಪೋಷಕರು ತಮ್ಮ ಅಮೂಲ್ಯ ಕೊಡುಗೆಗಳು ಮತ್ತು ಸಾಧನೆಗಳಿಂದ ತುಳು ಚಲನಚಿತ್ರರಂಗಕ್ಕೆ ಜಗತ್ತಿನಲ್ಲಿ ವಿಶೇಷ ಮಾನ್ಯತೆಯನ್ನು ತಂದು ಕೊಟ್ಟಿದ್ದಾರೆ. ಅವರ ಸಾಧನೆಗಳ ಕುರಿತಾದ ಮತ್ತು ಅವರ ಬಗೆಗಿನ ವೈಯಕ್ತಿಕ ಅಧ್ಯಯನಗಳಿಗೆ ಸಾಧ್ಯತೆ ಇದೆ.

ತುಳು ನಾಟಕ ಮತ್ತು ಚಲನಚಿತ್ರರಂಗದ ಇತಿಹಾಸ, ಪ್ರವೃತ್ತಿ, ಅನನ್ಯತೆಗಳು ಈ ಸಂಶೋಧನೆಯ ಮುಖ್ಯ ಧ್ಯೇಯವಾಗಿತ್ತು. ತುಳು ಚಲನಚಿತ್ರರಂಗದ ಏಳುಬೀಳುಗಳನ್ನು ಮತ್ತು ಆಧುನಿಕ ಸವಾಲುಗಳನ್ನು ಮುಂದಿಟ್ಟುಕೊಂಡು ತಾರ್ಕಿಕವಾಗಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

ಚಲನಚಿತ್ರ ಮಾಧ್ಯಮವನ್ನು ಕುರಿತು ಇಂದು ಜಗತ್ತಿನ ಎಲ್ಲೆಡೆ ವ್ಯಾಪಕ ಸಂಶೋಧನೆಗಳು ಜರುಗುತ್ತಿವೆ. ಭಾರತೀಯ ಚಲನಚಿತ್ರರಂಗ ಜಗತ್ತಿನಲ್ಲಿ ತನ್ನದೇ ಆದ ನೆಲೆ ಬೆಲೆಗಳನ್ನು ಸ್ಥಾಪಿಸಿದೆ. ತುಳು ನಾಟಕಗಳು ಕನ್ನಡ ನಾಟಕಗಳ ಹಾದಿಯನ್ನೇ ಅವಲಂಬಿಸಿದ್ದು ನಿಜವಾದರೂ ಬಹಳ ಅಳವಾಗಿ ಜೀವನವನ್ನು

ಶೋಧಿಸುವಲ್ಲಿ ಪ್ರಯತ್ನ ಮಾಡಿರಲಿಲ್ಲ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಸಂಶೋಧನೆಗೆ ಒಳಪಡಿಸಬಹುದಾಗಿದೆ.

ಸಾಮಾಜಿಕ, ರಾಜಕೀಯ, ವರ್ಣ ಸಂಘರ್ಷ ಮುಂತಾದ ವಿಚಾರಗಳನ್ನು ಮುಂದಿಟ್ಟುಕೊಂಡು ತುಳು ನಾಟಕ ಮತ್ತು ಸಿನಿಮಾಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

ತುಳು ನಾಟಕಗಳನ್ನು ಕನ್ನಡದ ಪ್ರಸಿದ್ಧ ನಾಟಕಕಾರರ ನಾಟಕಗಳೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡಿದಾಗ ಸಮಾನಾಂಶಗಳು ಕಂಡುಬರುತ್ತವೆ. ಆದರೆ ಕನ್ನಡ ನಾಟಕಗಳಿಗಿರುವಷ್ಟು ವ್ಯಾಪ್ತಿ, ವಿಸ್ತಾರ ತುಳುನಾಟಕಗಳಿಗೆ ಇಲ್ಲದಿದ್ದರೂ ತುಳುನಾಟಕಗಳ ಪಾತ್ರ ಕಡಿಮೆ ಇಲ್ಲ. ಮನರಂಜನೆಯೊಂದಿಗೆ ಹಾಸ್ಯ ಪ್ರಧಾನವಾಗಿ ಕಂಡರೂ ತುಳು ನಾಟಕಗಳು ಬುದ್ದಿಗೆ ಕೆಲಸ ನೀಡಿದೆ. ಹೊಸ ಅಲೆಯನ್ನು ಅಳವಡಿಸಿಕೊಂಡಿದೆ.

ತುಳುನಾಡಿನ ಪ್ರಾಚೀನ ನಂಬಿಕೆ, ರೀತಿ ರಿವಾಜುಗಳನ್ನು ಉಳಿಸಿ ಬೆಳೆಸಿದೆ. ಸಂಸ್ಕೃತಿ ಪರಂಪರೆಗೆ ತನ್ನದೇ ಆದ ಕೊಡುಗೆ ನೀಡಿದೆ. ಅನ್ಯ ಭಾಷಾ ವರ್ಗದೊಂದಿಗೆ ಸಾಮರಸ್ಯ ಮೂಡಿಸುತ್ತಾ ಅಷ್ಟೇ ಅಲ್ಲ ಅವುಗಳನ್ನು ತನ್ನಲ್ಲಿ ತೊಡಗಿಸಿಕೊಳ್ಳುತ್ತಾ ಕನ್ನಡ ನಾಟಕಗಳ ಸಾಧನೆಗೆ ಕಡಿಮೆ ಇಲ್ಲದಂತೆ ತುಳುನಾಟಕಗಳು ಬೆಳೆಯುತ್ತಿದೆ. ಕ್ರಿಯಾಶೀಲವಾಗಿದೆ.

ಮಹಾಪ್ರಬಂಧದ ಕೊನೆಗೆ ಅನುಬಂಧದಲ್ಲಿ ಪ್ರಧಾನ ಆಕರ, ಪರಾಮರ್ಶನ ಗ್ರಂಥಗಳು, ಸಾಂಸ್ಕೃತಿಕ ಪದಕೋಶ ಹಾಗೂ ಅಧ್ಯಯನಕ್ಕೆ ಪೂರಕವಾಗಿ ತುಳುನಾಟಕ ಮತ್ತು ಸಿನಿಮಾ ರಂಗದಲ್ಲಿ ದುಡಿದ ನಾಟಕಕಾರರು, ರಂಗಕಲಾವಿದರು, ಸಿನಿಮಾ ನಟರು, ಸಂಶೋಧಕರು ಮುಂತಾದವರನ್ನು ಕ್ಷೇತ್ರಕಾರ್ಯದ ಮೂಲಕ ಸಂದರ್ಶನ ಮಾಡಿ ದಾಖಲಿಸಿದ ವಿವರಗಳನ್ನು ನೀಡಲಾಗಿದೆ. ಅಲ್ಲದೇ ತುಳು ನಾಟಕ ಮತ್ತು ಸಿನಿಮಾಗಳ ಯಶಸ್ವಿಗೆ ಕಾರಣಕರ್ತರಾದ ಸಾಧಕರ ಹಾಗೂ ನಾಟಕ ಮತ್ತು ಸಿನಿಮಾಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಪ್ರಕಟಿಸಲಾಗಿದೆ .

ಪ್ರಧಾನ ಆಕರಗಳು

ತುಳು ಭಾಷೆಯ ಆಯ್ದ ನಾಟಕಗಳು

೧. ಅನಂತರಾಮ ಬಂಗಾಡಿ. ಕೆ. ೧೯೯೧, **ದೇವು ಪೂಂಜೆ**; ವಿ. ಪಿ. ಸಿ ಪಬ್ಲಿಕೇಶನ್ಸ್, ಮಂಗಳೂರು.

೨. ಅಮೃತ ಸೋಮೇಶ್ವರ. ೧೯೮೦, **ಗೋಂದೋಳು**; ಪ್ರಕೃತಿ ಪ್ರಕಾಶನ, ಕೋಟೆಕಾರು.

೩. ಅಮೃತ ಸೋಮೇಶ್ವರ. ೧೯೮೨, **ರಾಯರಾವುತೆ**; ತುಳುವ ಪ್ರಕಾಶನ ಮಂಗಳೂರು.

೪. ಅಮೃತ ಸೋಮೇಶ್ವರ. ೧೯೮೪, **ಪುತ್ತೂರ್ದ ಪುತ್ತೊಳಿ**; ಸಮೀರ ಪ್ರಕಾಶನ, ಪುತ್ತೂರು.

೫. ಅಮೃತ ಸೋಮೇಶ್ವರ. ೧೯೮೯, **ಏಳುವೆರ್ ದೆಯ್ಯಾರ್**; ಪ್ರಕೃತಿ ಪ್ರಕಾಶನ, ಕೋಟೆಕಾರು.

೬. ಅಮೃತ ಸೋಮೇಶ್ವರ. ೧೯೮೯, **ತುಳುನಾಡ ಕಲ್ಕುಡೆ**; ತುಳು ಸಂಘ ವಿವೇಕಾನಂದ ಕಾಲೇಜು ಪುತ್ತೂರು.

೭. ಆನಂದ ಕೃಷ್ಣ. ೧೯೯೭, **ಪಿಲಿಪತ್ತಿ ಗಡಸ್**; ದುರ್ಗಾ ಪ್ರಕಾಶನ, ಪೆರ್ಲಂಪಾಡಿ.

೮. ಆನಂದ ಪಾ. ಕೃ. ೧೯೮೩, **ಚದಿತ್ತ ಬದಿ**; ಸುಪ್ರಿಯಾ ಪ್ರಕಾಶನ, ಮಾಡಾವು.

೯. ಆನಂದ ಪಾ. ಕೃ. ೧೯೮೫, **ಒಂಜಿ ತಾಳಿ ರಡ್ ಸಾದಿ**; ಪ್ರತಿಮಾ ಪ್ರಕಾಶನ, ಪಂಜ.

೧೦. ಆನಂದ ಪಾ. ಕೃ. ೧೯೮೬, **ಬ್ರಹ್ಮರ್ಕಟ್**; ಸುಪ್ರಿಯಾ ಪ್ರಕಾಶನ, ಮಾಡಾವು.

೧೧. ಆನಂದ ಪಾ. ಕೃ. ೨೦೦೩, **ದೈವೊ ನಿರ್ಣಯೊ**; ಆನಂದ ಪ್ರಕಾಶನ, ಪಾಲ್ತಾಡಿ.

೧೨. ಇಬ್ರಾಹಿಂ ಯಂ. ಯೆಸ್, ೧೯೬೫, **ಪೊಣ್ಣೆ ಸಮಾಜದ ಕಣ್ಣ್**; ವೀಣಾ ಸಾಹಿತ್ಯ ನಿಲಯ, ಮಂಗಳೂರು.

೧೩. ಇಬ್ರಾಹಿಂ ಯಂ. ಯೆಸ್, ೧೯೭೧, **ಒಂಜಿ ಪೊಣ್ಣು ಆಜಿ ಕಣ್ಣ್**; ವೀಣಾ ಸಾಹಿತ್ಯ ನಿಲಯ, ಮಂಗಳೂರು.

೧೪. ಉದಯಶಂಕರ್ ಎನ್. ಎ. ೨೦೦೦, **ದಾರೆದಾಂತಿ ಮದಿಮೆ**; ನವರಂಗ ಆರ್ಟ್ಸ್ ಕೊಲ್ಲಂಗಾನ, ಕಾಸರಗೋಡು.

೧೫. ಉಮಾನಾಥ ವಿ. ಕೋಟ್ಯಾನ್. ೨೦೧೪, **ಪಗೆಕ್ ಪಗೆ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೧೬. ಕೊಕ್ರಾಡಿ ಕೆ. ಜೆ, ೧೯೮೪, **ಒಂಜಿ ಪೊಣ್ಣನ ಕಥೆ**; ಲೇಖಕ.

೧೭. ಕ್ಯಾಥರೀನ್ ರಾಡ್ರಿಗಸ್. ೧೯೯೨, **ಕೇದಗೆ**; ತುಳುಕೂಟ, ಉಡುಪಿ.

೧೮. ಗಂಗಾಧರ ಕಿದಿಯೂರು, ೧೯೯೨, **ಬದ್‌ಕೊಂಜಿ ಸರಿಗಮ**; ಮಧುಶ್ರೀ ಪ್ರಕಾಶನ, ಕಿದಿಯೂರು ಉಡುಪಿ.

೧೯. ಗಂಗಾಧರ ಕಿದಿಯೂರು, ೧೯೯೯, **ಎಣ್ಣೆದಾಂತಿ ತುಡರ್**; ಮಧುಶ್ರೀ ಪ್ರಕಾಶನ, ಕಿದಿಯೂರು ಉಡುಪಿ.

೨೦. ಗಣಪಯ್ಯ ಶೆಟ್ಟಿ ಸೀತಾನದಿ, ೧೯೮೧(ದ್ವಿ. ಮು) **ಕೋಟಿ ಚೆನ್ನಯ**; ಸುಬೋಧ ಸಾಹಿತ್ಯ ಭಂಡಾರ ಹಿರಿಯಡಕ.

೨೧. ಗೋಪಾಲಕೃಷ್ಣ ಎನ್. ೧೯೮೪, **ಕಲ್ಕುಡ– ಕಲ್ಲುರ್ಟಿ**; ಯಂ. ಬಿ. ದೇವಾಡಿಗ ಮಂಗಳೂರು.

೨೨. ಚಂದರ್ ಯು. ಆರ್. ೨೦೦೪, **ಕೋರ್ದಬು ತನ್ನಿಮಾನಿಗ**; ಸಂಗಾತಿ ಪ್ರಕಾಶನ ಸುಂದರಬಾಗ್, ಉಳ್ಳಾಲ.

೨೩. ಚಂದ್ರಹಾಸ ಸುವರ್ಣ ಶಿಮಂತೂರು, ೧೯೭೮, **ಬ್ರಹ್ಮನ ಬರವು**; ಲೇಖಕ.

೨೪. ಜಯಂತಿ ಎಸ್. ಬಂಗೇರ. ೧೯೯೯, **ಸತ್ಯ ನೆಗೆಪುನಗ**; ದುರ್ಗಾ ಪ್ರಕಾಶನ, ಮಂಗಳೂರು.

೨೫. ಟೇಲರ್ ಕೆ. ಎನ್. ೧೯೬೮, **ಕಲ್ಲ್‌ದ ದೇವೆರ್**; ಜಯಂತಿ ಪಬ್ಲಿಕೇಶನ್ಸ್, ಮಂಗಳೂರು.

೨೬. ಟೇಲರ್ ಕೆ. ಎನ್. ೧೯೭೦, **ತಮ್ಮಲೆ ಅರುವತ್ತನ ಕೋಲ**; ಯಂ. ವೆಂಕಟರಾವ್, ಮಂಗಳೂರು.

೨೭. ಟೇಲರ್ ಕೆ. ಎನ್. ೧೯೭೪(ದ್ವಿ. ಮು), **ಯೇರ್ ಮಲ್ತಿನ ತಪ್ಪು**; ಯಂ. ವೆಂಕಟರಾವ್, ಮಂಗಳೂರು.

೨೮. ಟೇಲರ್ ಕೆ. ಎನ್. ೧೯೭೯, **ಕಾಸ್‌ದಾಯೆ ಕಂಡನಿ**; ಜಯಂತಿ ಪಬ್ಲಿಕೇಶನ್ಸ್, ಮಂಗಳೂರು.

೨೯. ಟೇಲರ್ ಕೆ. ಎನ್. ೧೯೮೩, **ಕಂಡನೆ ಬುಡೆದಿ**; ಜಯಂತಿ ಪಬ್ಲಿಕೇಶನ್ಸ್, ಮಂಗಳೂರು.

೩೦. ಟೇಲರ್ ಕೆ. ಎನ್. ೧೯೮೫, **ದೇವೆರ್ ಕೊರ್ಪೆರ್**; ಯಂ. ವೆಂಕಟರಾವ್, ಮಂಗಳೂರು.

೩೧. ಟೇಲರ್ ಕೆ. ಎನ್. ೧೯೮೫, **ಯಾನ ಸನ್ಯಾಸಿ ಆಪೆ**; ಲೇಖಕ.

೩೨. ಟೇಲರ್ ಕೆ. ಎನ್. ೧೯೮೫, **ಯೇರ್ ಮಲ್ತಿನ ತಪ್ಪು**; ಲೇಖಕ.

೩೩. ನಾರಾಯಣ ಶೆಟ್ಟಿ ನಂದಳಿಕೆ, ೨೦೦೨, **ಬೊಜ್ಜ**; ಪಲ್ಲವಿ ಆರ್ಟ್ಸ್ ಮುಂಬಯಿ.

೩೪. ದಾಮೋದರ ಬಂಗೇರ. (ಸಂ) ೨೦೧೪, **ತುಳು ರಂಗನಾಟಕೊಲು**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೩೫. ಪಡುಬಿದ್ರಿ ಶಿವಣ್ಣ ಹೆಗ್ಡೆ, ೧೯೪೦, **ವಿದ್ಯೆದ ತಾದಿ**; ಕೆನರಾ ಛಾಪಖಾನೆ, ಮಂಗಳೂರು.

೩೬. ಪುರುಷೋತ್ತಮ. ಎಂ. ೧೯೬೯, **ಬೊಲ್ಲುದಾಂತಿ ತುಡರ್**; ಸಹೋದರ ಕಲಾವೃಂದ ಮಂಗಳೂರು.

೩೭. ಭಂಡಾರಿ. ಕೆ. ಬಿ. .....?, **ಬದಿತ್ತ ಬಯಕೆ**; ಲೇಖಕ.

೩೮. ಭಾಸ್ಕರ ಟಿ. ಬಂಗೇರ, ೧೯೭೮, **ಬಂಗಾರ್ದ ಬಿಸತ್ತಿ**; ವೀಣಾ ಸಾಹಿತ್ಯ ನಿಲಯ, ಮಂಗಳೂರು.

೩೯. ಮಚ್ಚೇಂದ್ರನಾಥ ಪಾಂಡೇಶ್ವರ. ೧೯೮೮, **ಕೌನ್ಸಿಲರ್ ಕೊಗ್ಗಣ್ಣೆ**; ವಿ. ಪಿ. ಸಿ ಪಬ್ಲಿಕೇಶನ್ಸ್, ಮಂಗಳೂರು.

೪೦. ಮಾಧವ ತಿಂಗಳಾಯ, ೧೯೩೩, **ಜನಮರ್ಲ್**; ತುಳುವ ಸಾಹಿತ್ಯ ಮಾಲೆ.

೪೧. ಮನು ಇಡ್ಯಾ. ೧೯೮೯, **ಬಲಿ**; ಸಿಂಗಾರ, ಸುರತ್ಕಲ್.

೪೨. ಮುದ್ದು ಮೂಡುಬೆಳ್ಳೆ. ೧೯೯೧, **ನಮ ಎಡ್ಡೆನಾ ಊರ್ಯೆಡ್ಡೆ**; ತುಳು ಚೇತನ ಬೆಂಗಳೂರು.

೪೩. ಮೂಡೂರು ಟಿ. ಜಿ. ೨೦೦೩, **ಅಮರ ಕಲ್ಯಾಣ ಕ್ರಾಂತಿ**; ಪ್ರತಿಮಾ ಪ್ರಕಾಶನ, ಪಂಜ.

೪೪. ರಾಮ ಕಿರೋಡಿಯನ್. ಬಿ, ೧೯೭೦, **ಸರ್ಪಸಂಕಲೆ**; ಕೋಕಿಲಾ ಆರ್ಟ್ಸ್, ಮಂಗಳೂರು.

೪೫. ರಾವ್. ಪಿ. ಎಸ್. ೧೯೭೦, **ಪಗೆತ ಪುಗೆ**; ಯಂ. ವೆಂಕಟರಾವ್, ನಿತ್ಯಾನಂದ, ಮಂಗಳೂರು.

೪೬. ರಾವ್. ಪಿ. ಎಸ್. ೧೯೭೭, **ಇಂಚಾಂಡ ಎಂಚ**; ಸಹೋದರ ಕಲಾವೃಂದ, ಮಂಗಳೂರು.

೪೭. ರಾವ್. ಪಿ. ಎಸ್. ೧೯೭೯, **ನಿಲೆದಾಂತಿ ಪೊಣ್ಣು**; ಸಹೋದರ ಕಲಾವೃಂದ, ಮಂಗಳೂರು.

೪೮. ರಾವ್. ಪಿ. ಎಸ್. ೧೯೮೭, **ಎಂಕ್‌ಲಾ ಮದಿಮೆ ಆವೋಡೇ**; ಸಹೋದರ ಕಲಾವೃಂದ, ಮಂಗಳೂರು.

೪೯. ರಾವ್. ಪಿ. ಎಸ್. ೧೯೯೩, (ದ್ವಿ. ಮು) **ಬದಿತ್ತ ಉರ್ಲು**; ಸಹೋದರ ಕಲಾವೃಂದ ಮಂಗಳೂರು.

೫೦. ವಿಜಯ ಕುಮಾರ ಶೆಟ್ಟಿ. ೧೯೯೯ **ಬದಿ**; ಕಲಾ ಜಗತ್ತು, ಮುಂಬಯಿ.

೫೧. ವಿಶುಕುಮಾರ್, ೧೯೬೭, **ಕೋಟಿಚೆನ್ನಯ**; ಲೇಖಕ.

೫೨. ಶಿವಾನಂದ ಕರ್ಕೇರಾ ಅತ್ತಾವರ. ೧೯೯೭, **ಎರುಮೈಂದೆ**; ಯುಗಪುರುಷ ಮುದ್ರಣಾಲಯ, ಕಿನ್ನಿಗೋಳಿ.

೫೩. ಶಿವಾನಂದ ಕರ್ಕೇರಾ ಅತ್ತಾವರ. ೨೦೦೫, **ಕಾರ್ನಿಕದ ದೈವ ವೈದ್ಯನಾಥೆ**; ಯುಗಪುರುಷ ಮುದ್ರಣಾಲಯ, ಕಿನ್ನಿಗೋಳಿ.

೫೪. ಶೆಟ್ಟಿ ಕೆ. ವಿ ೨೦೧೪, **ಗಗ್ಗರ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೫೫. ಶ್ರೀಭವ್ಯಾ, ೧೯೮೬, **ತೂ ತುಡರ್**; ಕೆ. ವಿ ಭಟ್ ಮಂಗಳೂರು.

೫೬. ಸಂಜೀವ ದಂಡಕೇರಿ, ೧೯೬೯, **ಗಂಗಾ ರಾಮ್**, ಲೇಖಕರು.

೫೭. ಸಂಜೀವ ದಂಡಕೇರಿ, ೧೯೯೮, **ಬಯ್ಯಮಲ್ಲಿಗೆ**; ಲೇಖಕ.

೫೮. ಸಂಜೀವ ಎ. ಬಿ. ಎಸ್ಸಿ ೧೯೭೦, **ನೆತ್ತೆರ್‌ದ ಕಾನಿಗೆ**; ಲೇಖಕ.

೫೯. ಸದಾನಂದ ಸುವರ್ಣ. ೧೯೮೩, **ಗುಡ್ಡೆದ ಭೂತ**; ರಂಗ ರಶ್ಮಿ ಪ್ರಕಾಶನ, ಮುಂಬಯಿ.

೬೦. ಸಾಲ್ಯಾನ್ ಎಂ. ಬಿ. ೧೯೮೨, **ಬಂಗಾರ್ದ ಕುರಲ್**; ಮೈನಾ ಪಬ್ಲಿಕೇಶನ್ಸ್, ಮಂಗಳೂರು.

೬೧. ಸಾಲ್ಯಾನ್ ಎಂ. ಬಿ. ೧೯೮೪, **ಧರ್ಮ ಕೈ ಬುಡಾಂದ್**; ಮೈನಾ ಪಬ್ಲಿಕೇಶನ್ಸ್, ಮಂಗಳೂರು.

೬೨. ಸಾಲ್ಯಾನ್ ಎಂ. ಬಿ. ೧೯೮೫, **ಸತ್ಯದ ತುಡರ್**; ಮೈನಾ ಪಬ್ಲಿಕೇಶನ್ಸ್, ಮಂಗಳೂರು.

ತುಳು ನಾಟಕ ಆಧಾರಿತ ಚಲನಚಿತ್ರಗಳು

೧. ಕೃಷ್ಣಪ್ಪ ಉಳ್ಳೂರು. ಹೌಂದ್ರಾಯನ ವಾಲಗ; ಕುಂಬ್ರ ರಘುನಾಥ ರೈ. ೧೯೯೮, **ಮಾರಿಬಲೆ**; ಶ್ರೀಅನ್ನಪೂಣೇಶ್ವರಿ ಫಿಲಂಸ್ ಬೆಂಗಳೂರು.

೨. ಗಂಗಾಧರ ಕಿರೋಡಿಯನ್ ಬಿ. ನೇಮದ ಬೂಳ್ಯ; ಗಂಗಾಧರ ಕಿರೋಡಿಯನ್ ಬಿ. ೨೦೧೭, **ನೇಮದ ಬೂಳ್ಯ**; ಕುದ್ರಾಡಿ ಕುಲದೇವತಾ ಕ್ರಿಯೇಷನ್ಸ್.

೩. ಗಂಗಾಧರ ಕಿರೋಡಿಯನ್ ಬಿ. ಪುಂಡಿ ಪಣವು; ಗಂಗಾಧರ ಕಿರೋಡಿಯನ್ ಬಿ. ೨೦೧೯, **ಪುಂಡಿ ಪಣವು**; ತವಿಷ್ ಎಂಟಪ್ರೈಸಸ್.

೪. ಗಂಗಾಧರ ಶೆಟ್ಟಿ. ಒರಿಯನ್ ತೂಂಡ ಒರಿಯಗಾಪುಜಿ; ಹ. ಸೂ. ರಾಜಶೇಖರ್. ೨೦೧೫, **ಒರಿಯನ್ ತೂಂಡ ಒರಿಯಗಾಪುಜಿ**; ಶ್ರೀ ಮಂಗಳ ಗಣೇಶ್ ಕಂಬೈನ್ಸ್.

೫. ಟೇಲರ್ ಕೆ. ಎನ್. ಯಾನ್ ಸನ್ಯಾಸಿ ಆಪೆ; ಗೀತಪ್ರಿಯ. ೧೯೭೩, **ಯಾನ್ ಸನ್ಯಾಸಿ ಆಪೆ**; ಗಣೇಶ್ ಇಂಟರ್ ನ್ಯಾಷನಲ್ ಫಿಲಂಸ್.

೬. ಟೇಲರ್ ಕೆ. ಎನ್. ಬಾಡಾಯಿದ ಬಂಗಾರ್; ಆರೂರು ಪಟ್ಟಾಭಿ. ೧೯೭೨, **ಬಿಸತ್ತಿ ಬಾಬು**; ಮೈಕೋ ಫಿಲಂಸ್.

೭. ಟೇಲರ್ ಕೆ. ಎನ್. ಕಾಸ್‌ದಾಯೆ ಕಂಡನಿ; ಗೀತಪ್ರಿಯ. ೧೯೭೩, **ಕಾಸ್‌ದಾಯೆ ಕಂಡನಿ**; ಮೈತ್ರಿ ಫಿಲಂಸ್ ಮಂಗಳೂರು.

೮. ಟೇಲರ್ ಕೆ. ಎನ್. ಕಲ್ಲ್ ದೇವೆರ್; ೧೯೭೬ ಗೀತಪ್ರಿಯ. **ಸಾವಿರಡೊರ್ತಿ ಸಾವಿತ್ರಿ**; ಗಣೇಶ್ ಇಂಟರ್ ನ್ಯಾಷನಲ್ ಫಿಲಂಸ್.

೯. ಟೇಲರ್ ಕೆ. ಎನ್. ಯೇರ್ ಮಲ್ತಿನ ತಪ್ಪು; ಕೆ. ಎನ್. ಟೇಲರ್. ೧೯೭೪, **ಯೇರ್ ಮಲ್ತಿನ ತಪ್ಪು**; ಗಣೇಶ್ ಇಂಟರ್ ನ್ಯಾಷನಲ್ ಫಿಲಂಸ್.

೧೦. ಟೇಲರ್ ಕೆ. ಎನ್. ಕಂಡನೆ ಬುಡೆದಿ; ಆರೂರು ಪಟ್ಟಾಭಿ. ೧೯೮೧. **ಭಾಗ್ಯವಂತೆದಿ**; ನಿರ್ಮಿತಾ ಮೂವೀಸ್.

೧೧. ನಾರಾಯಣ ಶೆಟ್ಟಿ ಕೆ. ಸತ್ಯ ಬತ್ತಲೆ; ರಿಚರ್ಡ್ ಕ್ಯಾಸ್ಟಲಿನೊ. ೧೯೯೩, **ಬಂಗಾರ್ ಪಟ್ಲೆರ್**, ರಾಜಲಕ್ಷ್ಮಿ ಫಿಲಂಸ್, ಮಂಗಳೂರು.

೧೨. ದೇವದಾಸ್ ಕಾಪಿಕಾಡ್; ಬಲೇ ಚಾಪರ್ಕ; ಆರೂರು ಪಟ್ಟಾಭಿ. ೧೯೯೧, **ಸತ್ಯ ಓಲುಂಡು**. ಎಚ್. ಎಸ್. ಫಿಲಂಸ್.

೧೩. ದೇವದಾಸ್ ಕಾಪಿಕಾಡ್. ಗಂಟೇತಾಂಡ್; ಪಿ. ಎಚ್. ವಿಶ್ವನಾಥ, ೧೯೯೧, **ತೆಲಿಕೆದ ಬೊಳ್ಳಿ**; ಸೆಂಟ್ರಲ್ ಸಿನಿಮಾಸ್

೧೪. ಭಂಡಾರಿ ಕೆ. ಬಿ. ಮೆಗ್ಗೆ ಪಲಯೆ; ಎಸ್. ಅರ್ ರಾಜನ್. ೧೯೭೧, **ಎನ್ನ ತಂಗಡಿ**; ಡಾಲಿ ಫಿಲಂಸ್.

೧೫. ಮಚೇಂದ್ರನಾಥ ಪಾಂಡೇಶ್ವರ. ಪೊರ್ತು ಕಂತ್‌ಂಡ್; ರಾಮ್ ಶೆಟ್ಟಿ. ೧೯೮೪, **ದಾರೆದ ಸೀರೆ**; ಆನಂದ ಫಿಲಂಸ್.

೧೬. ವಿಶುಕುಮಾರ್. ಕೋಟಿಚೆನ್ನಯ; ವಿಶುಕುಮಾರ್. ೧೯೭೩, **ಕೋಟಿಚೆನ್ನಯ;** ಪ್ರಜಾ ಫಿಲಂಸ್.

೧೭. ಸಂಜೀವ ಪಿ. ದಂಡಕೇರಿ. ಬಯ್ಯಮಲ್ಲಿಗೆ; ಆರೂರು ಪಟ್ಟಾಭಿ. ೧೯೭೪, **ಬಯ್ಯಮಲ್ಲಿಗೆ;** ಶ್ರೀ ಜಯರಾಮ ಫಿಲಂಸ್.

೧೮. ಸಂಜೀವ ಪಿ. ದಂಡಕೇರಿ. ಗಂಗಾರಾಮ್; ಆರೂರು ಪಟ್ಟಾಭಿ. ೧೯೭೭, **ಬೊಳ್ಳಿದೋಟ**; ಶ್ರೀ ಜಯರಾಮ ಫಿಲಂಸ್.

೧೯. ಸೀತಾರಾಮ ಕುಲಾಲ್ ಎಮ್. ಕೆ. ಉಡಲ್ದ ತುಡರ್; ಪದ್ಮನಾಭ. ೧೯೭೩ **ಉಡಲ್ದ ತುಡರ್**; ಕಲಾಕಿರಣ್ ಫಿಲಂಸ್, ಮಂಗಳೂರು.

೨೦. ವಿಜಯಕುಮಾರ್ ಕೊಡಿಯಾಲ್ ಬೈಲ್. ಒಂಜಿ ನಿಮಿಷ; ಕುಂಜಾಡಿ ಪ್ರೇಮನಾಥ ರೈ. ೧೯೯೮. **ಒಂತೆ ಅಡ್ಜಸ್ಟ್ ಮಲ್ಪಿ**. ಪದ್ಮ ಫಿಲಂಸ್.

೨೧. ವಿಜಯಕುಮಾರ್ ಕೊಡಿಯಾಲ್ ಬೈಲ್. ಒರಿಯರ್ದೊರಿ ಅಸಲ್; ಹ. ಸೂ. ರಾಜಶೇಖರ್. ೨೦೧೧, **ಒರಿಯರ್ದೊರಿ ಅಸಲ್**; ರೂಪಲಕ್ಷ್ಮಿ ಫಿಲಂಸ್.

೨೨. ವಿಜಯಕುಮಾರ್ ಕೊಡಿಯಾಲ್ ಬೈಲ್. ಮದಿಮೆ; ವಿಜಯಕುಮಾರ್ ಕೊಡಿಯಾಲ್ ಬೈಲ್. ೨೦೧೪ **ಮದಿಮೆ**; ಬಾಲಕೃಷ್ಣ ಫಿಲಂಸ್.

ಪರಾಮರ್ಶನ ಗ್ರಂಥಗಳು

೧. ಅಕ್ಷರ ಕೆ. ವಿ. ೧೯೮೨, **ರಂಗ ಅನ್ವೇಷಣೆ**: ಪೀಟರ್ ಬ್ರೂಕ್ ರಂಗ ಪ್ರಯೋಗಗಳು; ಅಕ್ಷರ ಪ್ರಕಾಶನ, ಸಾಗರ.

೨. ಅಬ್ದುಲ್ ರೆಹಮಾನ್ ಪಾಷಾ ಎಂ. ೧೯೮೭, **ಸಿನಿಮಾ** ಮತ್ತು ಪ್ರೇಕ್ಷಕ; ನವಕರ್ನಾಟಕ ಪ್ರಕಾಶನ ಬೆಂಗಳೂರು.

೩. ಅಮೃತ ಸೋಮೇಶ್ವರ. ೨೦೦೭, **ತುಳುವ ಜಾನಪದ: ಕೆಲವು ನೋಟಗಳು;** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಆಚಾರ್ಯ ಕೆ. ವಿ. ೧೯೭೬, **ಕರ್ನಾಟಕ ರಂಗಭೂಮಿ**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫. ಆದ್ಯ ರಂಗಾಚಾರ್ಯ. ೧೯೮೬, **ಭಾರತೀಯ ರಂಗಪರಂಪರೆ: ಕನ್ನಡ ರಂಗಭೂಮಿಯ ಮೇಲೆ ಛಾಯ;** ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಮೈಸೂರು.

೬. ಆದ್ಯ ರಂಗಾಚಾರ್ಯ, ೧೯೬೮, **ಕನ್ನಡ ರಂಗಭೂಮಿ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಇಂದಿರಾ ಎಂ. ಕೆ. ೨೦೦೪, **ಚಿತ್ರ–ಭಾರತ**; ಇಂದಿರಾ ಪ್ರಕಾಶನ, ಬೆಂಗಳೂರು.

೮. ಉಪಾಧ್ಯಾಯ ಯು. ಪಿ. (ಪ್ರಸಂ), ೧೯೮೮, **ತುಳು ನಿಘಂಟು ಸಂಪುಟ–೧;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೯. ಉಪಾಧ್ಯಾಯ ಯು. ಪಿ. (ಪ್ರಸಂ) ೧೯೯೨, **ತುಳು ನಿಘಂಟು ಸಂಪುಟ–೨;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೦. ಉಪಾಧ್ಯಾಯ ಯು. ಪಿ. (ಪ್ರಸಂ) ೧೯೯೫, **ತುಳು ನಿಘಂಟು ಸಂಪುಟ–೩;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೧. ಉಪಾಧ್ಯಾಯ ಯು. ಪಿ. (ಪ್ರಸಂ) ೧೯೯೭, **ತುಳು ನಿಘಂಟು ಸಂಪುಟ–೪;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೨. ಉಪಾಧ್ಯಾಯ ಯು. ಪಿ. (ಪ್ರಸಂ) ೧೯೯೭, **ತುಳು ನಿಘಂಟು, ಸಂಪುಟ–೫;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೩. ಉಪಾಧ್ಯಾಯ ಯು. ಪಿ. (ಪ್ರಸಂ), ೧೯೯೭, **ತುಳು ನಿಘಂಟು, ಸಂಪುಟ–೧;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೪. ಉಮೇಶ್ ಎಂ. ಎಸ್. ೨೦೦೪, **ಪುಟ್ಟಣ್ಣ ಕಣಗಾಲ್ ಚಿತ್ರರಂಗದ ಗಣ್ಯರು ಕಂಡಂತೆ;** ಬೆಂಗಳೂರು.

೧೫. ಉಮೇಶ್ ಹೆಚ್. ಎಸ್. (ಅನು)೨೦೦೫, **ರಂಗಭೂಮಿ ಮತ್ತು ಪ್ರೇಕ್ಷಕರ ನಡುವಿನ ಅಂಚಿನಲ್ಲಿ;** ರಂಗಾಯಣ, ಮೈಸೂರು.

೧೬. ಎನ್ಕೆ. ೨೦೦೧, **ಉತ್ತರ ಕರ್ನಾಟಕದ ರಂಗಭೂಮಿ;** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೭. ಕಟ್ಟಿಮನಿ ಆರ್. ವಿ. ೨೦೦೧, **ಚಿತ್ರಜಗತ್ತು;** ಸೋನು ಎಂಟರ್‌ಪ್ರೈಸಸ್ ಬೆಂಗಳೂರು

೧೮. ಕಟ್ಟಿಮನಿ ಹೆಚ್. ಆರ್. ೨೦೦೩, **ಕರ್ನಾಟಕ ರಂಗಭೂಮಿ ವೈಭವ;** ಮನೋಹರಿ ಪ್ರಿಂಟರ್ಸ್, ಹುಬ್ಬಳ್ಳಿ.

೧೯. ಕೀರ್ತಿನಾಥ್ ಕುರ್ತಕೋಟಿ. (ಸಂ), ೧೯೭೪, **ಇಂದು ಕನ್ನಡ ವೃತ್ತಿ ರಂಗಭೂಮಿ;** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೦. ಕೀರ್ತಿನಾಥ್ ಕುರ್ತಕೋಟಿ. (ಸಂ), ೧೯೫೯, **ನಡೆದು ಬಂದ ದಾರಿ;** ಮನೋಹರ ಗ್ರಂಥಮಾಲಾ, ಧಾರವಾಡ.

೨೧. ಕೇವಲ್, ಜೆ. ಕುಮಾರ್, ೧೯೯೪, **ಸಮೂಹ ಸಂವಹನ: ವಿಮರ್ಶಾತ್ಮಕ ವಿಶ್ಲೇಷಣೆ;** ವಿಪುಲ್ ಪ್ರಕಾಶನ, ಬೆಂಗಳೂರು.

೨೨. ಗಂಗಾಧರ ಮೊದಲಿಯಾರ್. ೧೯೯೮, **ಕನ್ನಡ ಸಿನಿಮಾ ಇತಿಹಾಸ ಪುಟಗಳು;** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೩. ಗಿರೀಶ್ ಕಾಸರವಳ್ಳಿ. ೧೯೮೩, **ಸಿನಿಮಾ ಕಲೆ–ನೆಲೆ;** ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.

೨೪. ಗೋಪಿ ಕಾನ ಕಾನಹಳ್ಳಿ. ೧೯೮೦, **ಬಯೋಸ್ಕೋಪ್;** ಅಂಜನ ಪ್ರಕಾಶನ, ಬೆಂಗಳೂರು.

೨೫. ಗೋವರ್ಧನ ಸುಂಕಂ. ೨೦೨೧, **ಸಾಹಿತ್ಯ ಅನುಭವ ವಿಸ್ತರಣೆ ಹಾಗೂ ಪರ್ಯಾಯ ಚಲನಚಿತ್ರಗಳು;** ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು–೫೬೦೦೦೨.

೨೬. ಚಂದ್ರಶೇಖರ ಕಂಬಾರ. ೨೦೦೪, **ದೇಶಿಯ ಚಿಂತನೆ;** ಅಂಕಿತ ಪುಸ್ತಕ, ಬೆಂಗಳೂರು.

೨೭. ಚಂದರ್ ಯು. ಆರ್. ೧೯೯೪, **ಕದಿಕೆ– ತುಳು ರಂಗಭೂಮಿದ ಸಮಸ್ಯೆಲು** (ವಿಶ್ವ ತುಳು ಸಮ್ಮೇಳನ ಸ್ಮರಣ ಸಂಚಿಕೆ).

೨೮. ಚಂದ್ರಶೇಖರ್ ಬಿ. ಎಸ್. ೨೦೦೩, **ಸಂವಹನ ಮಾಧ್ಯಮಗಳು;** ಕನ್ನಡ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ.

೨೯. ಜಯಲಕ್ಷ್ಮಿ ಆರ್. ಶೆಟ್ಟಿ. ೨೦೨೨, **ಕವಿ, ನಾಟಕಕಾರೆ, ಕಲಾವಿದೆ ಅತ್ತಾವರ ಶಿವಾನಂದ ಕರ್ಕೇರ;** (ಮದಪ್ಪೆರಾವಂದಿ ತುಳುವೆರ್ ಮಾಲಿಕೆ–೫೯) ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ತುಳು ಭವನ, ಉರ್ವಸ್ಟೋರ್, ಮಂಗಳೂರು.

೩೦. ತಮ್ಮ ಲಕ್ಷ್ಮಣ. ೨೦೨೨, **ತುಳು ಬೆಳ್ಳಿತೆರೆಯ ಸುವರ್ಣ ಯಾನ;** ದೃಶ್ಯ. ೪–೮೭/೧೦, ಮಾಲೆಮಾರ್, ಪರಪಾದೆ ರಸ್ತೆ, ದೇರೆಬೈಲ್, ಮಂಗಳೂರು.

೩೧. ದಾಮೋದರ ಶೆಟ್ಟಿ. ನಾ. ೨೦೦೬, **ಚಿತ್ರಭಾರತಿ**(ಸ್ಮರಣ ಸಂಚಿಕೆ), ಚಿತ್ರಭಾರತಿ, ಜೆ. ವಿ ಬಿಲ್ಡಿಂಗ್, ೨ನೇ ಮಹಡಿ, ಹಂಪನಕಟ್ಟೆ, ಮಂಗಳೂರು.

೩೨. ಪುಟ್ಟಸ್ವಾಮಿ. ೨೦೦೯, **ಸಿನಿಮಾ ಯಾನ;** ಹಸಿರು ಪ್ರಕಾಶನ, ಬೆಂಗಳೂರು.

೩೩. ಪುಟ್ಟಸ್ವಾಮಿ ಮತ್ತು ಪ್ರಕಾಶ್ ಜಗನ್ನಾಥ್. ೧೯೯೫, **ಜ್ಞಾನಪೀಠ ಪ್ರಶಸ್ತಿ ವಿಜೇತರು ಮತ್ತು ಕನ್ನಡ ಚಿತ್ರರಂಗ;** ವಾರ್ತಾ ಮತ್ತು ಪ್ರಸಾರ ಇಲಾಖೆ, ಬೆಂಗಳೂರು.

೩೪. ಪುರುಷೋತ್ತಮ ಬಿಳಿಮಲೆ. ೧೯೯೦, **ಕರಾವಳಿ ಜನಪದ;** ಮಂಗಳೂರು

೩೫. ಪ್ರೇಮಪಲ್ಲವಿ ಸಿ. ಬಿ. ೨೦೧೪, **ಕನ್ನಡ ಚಲನಚಿತ್ರ ಭಾಷೆ;** ಡಾ. ಎಮ್. ಭೈರೇಗೌಡ, ಪ್ರಗತಿ ಗ್ರಾಫಿಕ್ಸ್– ಬೆಂಗಳೂರು, ನಂ ೧೯೯, ೩ನೇ ತಿರುವು ೮ನೇ ಮುಖ್ಯರಸ್ತೆ, ಹಂಪಿನಗರ ಬೆಂಗಳೂರು. ೫೬೦೧೦೪

೩೬. ಬರಗೂರು ರಾಮಚಂದ್ರಪ್ಪ. ೨೦೦೪, **ಸಿನಿಮಾ ಒಂದು ಜಾನಪದ ಕಲೆ**, ಅಂಕಿತ ಪುಸ್ತಕ ಪ್ರಕಾಶನ ಸಂಸ್ಥೆ, ಬೆಂಗಳೂರು.

೩೭. ಬಸವರಾಜು ಜೆ. ಪಿ. ೧೯೯೪, **ಚಾರ್ಲಿ ಚಾಪ್ಲಿನ್**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೮. ಬೊಳುವಾರು ಐ. ಕೆ. ೧೯೮೯, **ಪನಿಯಾರ–'ತುಳು ನಾಟಕೊಲು–ನಾಲ್ ಪಾತೆರೊ'**(ಅಖಿಲ ಭಾರತ ತುಳು ಸಮ್ಮೇಳನ ಸ್ಮರಣ ಸಂಚಿಕೆ–೮೯.

೩೯. ಬ್ಲಾಜಾ ಅಹಮ್ಮದ್ ಅಬ್ಬಾಸ್. ೧೯೭೭, **ಚಲನಚಿತ್ರಗಳ ನಿರ್ಮಾಣ**; ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ.

೪೦. ಮಂಜುನಾಥ್ ಹ. ಸಂ. ೨೦೦೦, **ಚಲನಚಿತ್ರರಂಗಕ್ಕೆ ಪ್ರವೇಶ**; ಪ್ರಶಾಂತ ಪ್ರಕಾಶನ, ಬೆಂಗಳೂರು.

೪೧. ಮಹಾಬಲೇಶ್ವರ ಕಾಟ್ರಹಳ್ಳಿ. ೧೯೯೩, **ಸಾಹಿತ್ಯ ಮತ್ತು ಸಿನಿಮಾ**; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೨. ಮುದ್ದು ಮೂಡುಬೆಳ್ಳೆ, ೨೦೦೫, **ತುಳು ರಂಗಭೂಮಿ**; ಸಾಹಿತ್ಯ, ಸಂಸ್ಕೃತಿ ವೇದಿಕೆ ಬೆಳ್ಳೆ, ಎ.ಐ ಆರ್ ಕ್ವಾಟ್ರಸ್, ಉರ್ವಸ್ಟೋರ್, ಮಂಗಳೂರು. ೫೭೫೦೦೬.

೪೩. ಮುರಳೀಧರ ಉಪಾಧ್ಯಾಯ ಹಿರಿಯಡಕ (ಸಂ). ೧೯೯೬, **ಬಿ.ವಿ ಕಾರಂತ**; ಕರ್ನಾಟಕ ಸಂಘ ಪುತ್ತೂರು.

೪೪. ಮೋಹನ್ ಕೃಷ್ಣ ರೈ. ಕೆ. ೧೯೯೯, **ತುಳು ಸಂಸ್ಕೃತಿ**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೫. ಮೋಹನ್ ಕೃಷ್ಣ ರೈ. ಕೆ. ೧೯೯೯, **ತುಳು ಸಂಸ್ಕೃತಿ: ಚತುರ್ಮುಖ ಅಧ್ಯಯನ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ಯದುಪತಿ ಗೌಡ ಡಿ. ೨೦೦೬, **ತುಳುನಾಡ ನಲಿಕೆಲು**, ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೪೭. ರಂಗನಾಥ್ ಹೆಜ್. ಕೆ. ೧೯೯೦, **ಕನ್ನಡ ರಂಗಭೂಮಿಯ ವಿಕಾಸ**; (ಪ್ರಯೋಗಾಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು), ಅಭಿನಯ ಪ್ರಕಾಶನ, ಮೈಸೂರು.

೪೮. ರಾಮಕೃಷ್ಣ ಮರಾಠ ಮತ್ತು ಗುಡಿಹಳ್ಳಿ ನಾಗರಾಜ (ಸಂ), ೨೦೦೩, **ವೃತ್ತಿ ರಂಗದ ಮಹತ್ತರ ನಾಟಕಗಳು**; ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೪೯. ರಾಮನಾಥ್ ಎಚ್ ಕೆ. (೧೯೯೦), **ಕನ್ನಡ ರಂಗಭೂಮಿಯ ವಿಕಾಸ**; ಅಭಿನಯ ಪ್ರಕಾಶನ, ೪೭೪, ೪ನೇ ಮುಖ್ಯರಸ್ತೆ, ಕುವೆಂಪು ನಗರ ಮೈಸೂರು. ೫೭೦೦೨೩.

೫೦. ರಾಮನಾಥ್ ಹೆಚ್. ಕೆ. ೨೦೦೪, **ರಂಗ ಸಂಬಂಧ**; ಸ್ಕಾಲರ್ಸ್ ಬುಕ್, ಮೈಸೂರು.

೫೧. ರಾವ್ ಹೆಚ್. ಬಿ. ಎಲ್. ೨೦೦೫, **ಯಕ್ಷಗಾನ ಮುಖವರ್ಣಿಕೆ**; ಪದವೀಧರರ ಯಕ್ಷಗಾನ ಸಮಿತಿ ಮುಂಬೈ.

೫೨. ರಹಮತ್ ತರೀಕೆರೆ. ೨೦೦೪, **ಸಾಂಸ್ಕೃತಿಕ ಅಧ್ಯಯನ;** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೩. ಲೀಲಾವತಿ ಕೆ. ಕದಿಕೆ; (ಸ್ಮರಣ ಸಂಚಿಕೆ) **ವಿಶ್ವ ತುಳು ಸಮ್ಮೇಳನ,** ಮಂಗಳೂರು.

೫೪. ವಾಮನ ನಂದಾವರ. ೨೦೦೯, ಕೊಡಿಪು; **ವಿಶ್ವ ತುಳು ಸಮ್ಮೇಳನ,** ಮಂಗಳೂರು.

೫೫. ವಿಜಯಾ ಮತ್ತು ಇತರರು (ಸಂ). ೨೦೦೧, **ಕನ್ನಡ ಚಲನಚಿತ್ರ ಇತಿಹಾಸ;** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ವಿದ್ಯಾಶಂಕರ್ ಎನ್. ೧೯೮೫, **ಸ್ವಂತಿಕೆಯ ಅನ್ವೇಷಣೆಯಲ್ಲಿ ಮೂರನೇ ಜಗತ್ತಿನ ಸಿನಿಮಾ–೧;** ಪುಸ್ತಕ ಚಂದನ, ಮೈಸೂರು.

೫೭. ವಿವೇಕ ರೈ, ಬಿ. ಎ. ೧೯೮೦, **ತುಳುವ ಅಧ್ಯಯನ ಕೆಲವು ವಿಚಾರಗಳು;** ತುಳುವ ಪ್ರಕಾಶನ ಕಂಕನಾಡಿ, ಮಂಗಳೂರು.

೫೮. ವಿವೇಕ ರೈ. ಬಿ. ಎ. ೧೯೭೭, **ತೌಳವ ಸಂಸ್ಕೃತಿ;** ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

೫೯. ವಿವೇಕ ರೈ ಬಿ. ಎ. (ಪ್ರ. ಸಂ). ೨೦೦೭, **ತುಳು ಸಾಹಿತ್ಯ ಚರಿತ್ರೆ;** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ವಿವೇಕ ರೈ ಬಿ. ಎ. ೨೦೧೬, **ಮಂಗಳೂರು ದರ್ಶನ ಸಂ–೧;** ಜಿಲ್ಲಾಧಿಕಾರಿಗಳು ಮಂಗಳೂರು.

೬೧. ವಿಷ್ಣುಭಟ್ಟ ಪಾದೇಕಲ್ಲು. (ಸಂ), **ತುಳುವರಿವರು;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೬೨. ವೈಕುಂಠರಾಜು ಬಿ. ವಿ. ೧೯೯೭, **ಕನ್ನಡ ರಂಗಭೂಮಿ;** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೩. ಶಾಮಸುಂದರ ಬಿದರಕುಂದಿ, ೧೯೯೮, **ಸ್ವಾತಂತ್ರ್ಯ ಹೋರಾಟ ಮತ್ತು ರಂಗಭೂಮಿ;** ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೬೪. ಶಿವಪ್ರಕಾಶ್ ಹೆಚ್. ಎಸ್. ೧೯೯೩, **ಸಾಹಿತ್ಯ ಮತ್ತು ರಂಗಭೂಮಿ;** ಕನ್ನಡಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೫. ಶ್ರೀರಂಗ. ೧೯೮೭, **ಕನ್ನಡ ರಂಗಭೂಮಿ ನಡೆದು ಬಂದ ದಾರಿ;** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೬. ಸದಾನಂದ ಕನವಳ್ಳಿ. ೧೯೭೯, **ನಾಟಕಕಾರ ಗುಬ್ಬಿ ವೀರಣ್ಣ**; ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ.

೬೭. ಸಿದ್ದಲಿಂಗಯ್ಯ, ೨೦೦೭, **ಜಾನಪದ ಸಂಸ್ಕೃತಿ**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೮. ಸುಬ್ಬಣ್ಣ ಕೆ. ವಿ. ೧೯೮೩, **ಅಭಿವೃದ್ಧಿಗಾಗಿ ಸಿನಿಮಾ**; ಅಕ್ಷರ ಪ್ರಕಾಶನ, ಸಾಗರ.

ಅಂತರ್ಜಾಲ ಕೊಂಡಿಗಳು

೧. ಕೆ.ಎನ್ ಟೇಲರ್ ಅವರ ಬದುಕಿನ ದಾಖಲೀಕರಣ :

https://youtu.be/1_jZXXroO3s?si=Xz322k2ME9AYhwM9

೨. ಕೋಟಿ ಚೆನ್ನಯ ತುಳು ಸಿನಿಮಾ :

https://youtu.be/JhU75QjfqZs?si=i1mVMXhDG8zZ7kBy

೩. ಹಳೆಯ ತುಳು ಸಿನಿಮಾ ಗೀತ ಸಾಹಿತ್ಯ :

https://youtu.be/YPRRS1A9GEk?si=S4drmwx3sEfMNNP2

೪. 'ತುಳುನಾಡ ಸಿರಿ' ಸಿನಿಮಾ :

https://youtu.be/EsDk41kQF5Y?si=m2OJyj4BtDU1i1Fb

೫. 'ಬೊಳ್ಳಿದೊಟ' ಸಿನಿಮಾ :

https://youtu.be/p2esirlJ4Qw?si=nvJq8zkffSzEIKJV

ಸಾಂಸ್ಕೃತಿಕ ಪದಕೋಶ

೧) ಅಣಿ : ಭೂತಾರಾಧನೆಯಲ್ಲಿ ಭೂತನರ್ತಕನು ಅಡಿಕೆ ಹಾಳೆ, ಬಟ್ಟೆ, ಎಳೆಯ ತೆಂಗಿನ ಗರಿ ಅಥವಾ ಲೋಹ ಸಾಮಗ್ರಿಗಳಿಂದ ಅಲಂಕರಿಸಿ ತನ್ನ ಬೆನ್ನಿಗೆ ಕಟ್ಟಿಕೊಳ್ಳುವ ಪ್ರಭಾವಳಿಯಂತಹ ವಿಸ್ತಾರವಾದ ರಚನೆ.

೨) ಆಟಿಕಳೆಂಜ : ತುಳುನಾಡಿನ ಒಂದು ದೈವ. ಆಟಿ ತಿಂಗಳಿನಲ್ಲಿ ನಲಿಕೆ ಜನಾಂಗದವರು ಈ ದೈವದ ವೇಷ ಧರಿಸಿ ಮನೆ ಮನೆಗೆ ಹೋಗಿ ರೋಗ ಭಾದೆಯ ನಿವಾರಣೆಗಾಗಿ ಪಾಡ್ದನ ಹೇಳಿ ಕುಣಿದು ಅರಸಿನ, ಉಪ್ಪು, ಮಸಿ ಮೊದಲಾದವುಗಳನ್ನು ಮಂತ್ರಿಸಿ ಎಸೆದು, ಹಟ್ಟಿಯ ಜಾನುವಾರುಗಳ ಹಾಗೂ ಮನೆ ಮಂದಿಯ ಅನಿಷ್ಟ ನಿವಾರಣೆ ಮಾಡುತ್ತಾರೆ. ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕಂಡುಬರುವ ಈ ಕುಣಿತವನ್ನು ತುಳು ತಿಂಗಳಾದ ಆಟಿ (ಆಷಾಡ–ಜುಲೈ, ಆಗಸ್ಟ್)ಯಲ್ಲಿ ಹುಣ್ಣಿಮೆಯ ಸಂದರ್ಭದಲ್ಲಿ ನಡೆಸುತ್ತಾರೆ. ಹಗಲು ಹೊತ್ತು ಮೂರು, ಐದು ಅಥವಾ ಏಳು ದಿವಸಗಳ ಕಾಲ ನಲಿಕೆ ಹಾಗೂ ಮೇರ ಜಾತಿಯ ಸಮುದಾಯ ಇದನ್ನು ನಡೆಸುತ್ತಾರೆ.

೩) ಆಟಿ ಅಮವಾಸ್ಯೆ : ಕರ್ಕಟ ಮಾಸದ ಅಮಾವಾಸ್ಯೆ. ಸಮುದ್ರ ಸ್ನಾನ, ಹಾಲೆ ಮರದ ತೊಗಟೆಯ ರಸ ಪಾನ, ಭೂತಗಳಿಗೆ ಅಗೆಲು (ಎಡೆ) ಅರ್ಪಿಸುವುದು ಮೊದಲಾದವು ಈ ದಿನದ ವಿಶೇಷ ಆಚರಣೆಗಳು.

೪) ಓಬೆಲೆ : ಗದ್ದೆಯಲ್ಲಿ ನಾಟಿಯ ಮಾಡುವಾಗ ಹೆಂಗಸರು ಹಾಡುವ ಒಂದು ಬಗೆಯ ಶ್ರಮನಿವಾರಕ ಗೇಯ ಭರಿತ ಹಾಡು.

೫) ಕಂಗಿಲು/ ಸಂಗಿಲ್ ಕೋಲ : 'ಮುಂಡಾಲ' ಎಂಬ ಜನವರ್ಗದವರು ಕುಂಭ ಮಾಸದಲ್ಲಿ ವೇಷ ಹಾಕಿಕೊಂಡು ತೆಂಗಿನ ಎಳೆಗರಿಯ ಉಡುಗೆ ಧರಿಸಿ ಮನೆ

ಮನೆಗಳಿಗೆ ಹೋಗಿ ಅನಿಷ್ಟ ನಿವಾರಣೆಗಾಗಿ ಮಾಡುವ ಒಂದು ಬಗೆಯ ಧಾರ್ಮಿಕ ಕುಣಿತ.

೬) ಕಂಬಿಲ್ : ಮಕ್ಕಳು ಹಾಗು ಜಾನುವಾರುಗಳಿಗೆ ಅನಾರೋಗ್ಯ ಆಪತ್ತುಗಳು ಬಂದಾಗ ದೈವಸ್ಥಾನಗಳಿಗೆ ಹೇಳುವ ಒಂದು ಬಗೆಯ ಹರಕೆ. ಜಾತ್ರೆಯ ಅಥವಾ ಭೂತ ಕೋಲದ ದಿನ ಹರಿವಾಣದಲ್ಲಿ ಅಕ್ಕಿ ತೆಂಗಿನಕಾಯಿ, ಅಡಕೆ, ವಿಳ್ಯದೆಲೆ, ಕಲಶ ಕನ್ನಡಿ, ದೀಪ ಮುಂತಾದ ದ್ರವ್ಯಗಳನ್ನು ಇಟ್ಟುಕೊಂಡು ಹರಕೆ ಒಪ್ಪಿಸಬೇಕಾದ ಮಗು ಅಥವಾ ಕರುಗಳನ್ನು ಗುಡಿಯ ಸುತ್ತ ಕುಣಿಯುತ್ತಾ ಬರುವ ಭೂತ ನರ್ತಕನಿಗೆ ಅಭಿಮುಖವಾಗಿ ಪ್ರದಕ್ಷಿಣೆ ಬರಿಸುವ ಆಚರಣೆ.

೭) ಕನ್ಯಾಪು : ಈ ಕುಣಿತವನ್ನು ನಲಿಕೆ ಜನಾಂಗದವರು ಮಾಡುತ್ತಾರೆ. ನಲಿಕೆ ಜನಾಂಗದವರು ಮಾಡುವ ಕುಣಿತದಲ್ಲಿ ಮದುಮಗಳು ಮತ್ತು ಮದುಮಗ ವೇಷಗಳಿರುತ್ತವೆ. ಕೆಲವು ಕಡೆ ಪರವ ಜಾತಿಯವರು ಈ ಕುಣಿತವನ್ನು ಕುಣಿಯುತ್ತಾರೆ. ಅವರು ಇದನ್ನು ಮದಿಮಾಯ ಮದಿಮ್ಮಾಲ್ ಕುಣಿತ ಎಂದು ಕರೆಯುತ್ತಾರೆ. ಈ ಕುಣಿತದೊಂದಿಗೆ ಹಿಮ್ಮೇಳದಲ್ಲಿ ತೆಂಬರೆ ಬಡಿಯುತ್ತಾ ಕನ್ಯಾಪು ಹಾಡನ್ನುಹಾಡುತ್ತಾರೆ. ಪದದ ಗತಿಗೆ ಸರಿಯಾಗಿ ಕುಣಿತ ಇರುತ್ತದೆ.

೮) ಕರಂಗೋಲು : ತುಳುನಾಡಿನ ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲೂಕಿನಲ್ಲಿ ಆದಿ ದ್ರಾವಿಡ(ಮನ್ನ) ಜನಾಂಗದವರು ಈ ಜನಪದ ನೃತ್ಯವನ್ನು ಮಾಡಿದರೆ, ಬಂಟ್ವಾಳ ತಾಲೂಕಿನಲ್ಲಿ ಮುಗೇರ ಜನಾಂಗದವರು ಮಾಡುತ್ತಾರೆ. ಈ ಜನಪದ ನೃತ್ಯದಲ್ಲಿ ಹಿಮ್ಮೇಳ, ಮುಮ್ಮೇಳ ಸೇರಿ ಐದು ಜನ ಇರುತ್ತಾರೆ. ಸುಗ್ಗಿ ತಿಂಗಳ ಹುಣ್ಣಿಮೆಯ ಹಿಂದು ಮತ್ತೆ ಮುಂದಿನ ದಿನ ಒಟ್ಟು ಮೂರು ದಿನ ಮನೆ ಮನೆಗೆ ಹೋಗಿ ಕುಣಿಯುತ್ತಾರೆ.

೯) ಕಲ್ತಪ್ಪ : ಕರಾವಳಿ ಭಾಗದಲ್ಲಿ ಉಪಹಾರಕ್ಕೆ ಮಾಡುವ ಒಂದು ಬಗೆಯ ಖಾದ್ಯ. ಈ ಖಾದ್ಯಕ್ಕೆ ಗಂಡದ ಅಡ್ಡೆ (ಕೆಂಡದ ಗಟ್ಟಿ), ಬಣಲೆದಡ್ಡೆ, ಕಲ್ಲಪ್ಪ ಎಂಬ ಹೆಸರುಗಳಿವೆ. ಅಕ್ಕಿ, ಬೆಲ್ಲ,

ಕಾಯಿತುರಿಯನ್ನು ಬಳಸಿ ಮಾಡುವ ತುಳುನಾಡಿನ ಸಾಂಪ್ರದಾಯಿಕ ತಿಂಡಿಯಾಗಿದೆ.

೧೦) ಕಲಸೆ/ಕಳಸೆ : ಸುಮಾರು ಹತ್ತು ಅಥವಾ ಹದಿನಾಲ್ಕು ಸೇರು ಧಾನ್ಯ ತುಂಬುವ ಅಳತೆಯ ಒಂದು ದೇಸೀಯ ಮಾನ.

೧೧) ಕಲೆಂಬಿ : ಮರದ ಅಥವಾ ಕಲ್ಲಿನ ದೊಡ್ಡ ಪೆಟ್ಟಿಗೆ.

೧೨) ಕೆಡ್ಡಸ : ಮಕರ ಮಾಸದ ಇಪ್ಪತ್ತೇಳನೇಯ (೨೭) ದಿನ ಮೊದಲ್ಗೊಂಡು ಕುಂಭ ಸಂಕ್ರಮಣದ ವರೆಗಿನ ದಿನಗಳಲ್ಲಿ ಆಚರಿಸುವ ತುಳುನಾಡಿನ ಒಂದು ಹಬ್ಬ. ಈ ಮೂರು ದಿನಗಳಲ್ಲಿ ಭೂ ದೇವಿಯು ಪುಷ್ಪವತಿಯಾಗಿ ಫಲವತಿಯಾಗುವಳೆಂಬುದು ಜನಪದ ನಂಬಿಕೆ. ಈ ಸಮಯದಲ್ಲಿ ಮೂಡು ದಿಕ್ಕಿನಿಂದ ಬೀಸುವ ಒಂದು ವಿಲಕ್ಷಣವಾದ ಗಾಳಿಯನ್ನು ಕೆಡ್ಡಸದ ಗಾಳಿ' ಎನ್ನುತ್ತಾರೆ. ಈ ದಿನಗಳಲ್ಲಿ ನೆಲ ಅಗೆಯುವ, ಉಳುವ ಕೆಲಸ ನಿಷಿದ್ಧ, ಶೂರರು ಬೇಟೆಗೆ ಹೋಗುವುದು ಸಂಪ್ರದಾಯ. ಅಕ್ಕಿ, ಉರುಳಿ ಮತ್ತಿತರ ಧಾನ್ಯಗಳನ್ನು ಹುರಿದು ಕೊಬ್ಬರಿ ಚೂರುಗಳನ್ನು ಬೆರೆಸಿ ಭೂದೇವಿಗೆ ಸಮರ್ಪಿಸಿ ತಿನ್ನುವುದು ವಾಡಿಕೆ. ಕೊನೆಯ ದಿನ ಭೂ ದೇವಿಯ ಸ್ನಾನ ಹಾಗೂ ಅಲಂಕಾರಕ್ಕೆ ಸಂಬಂಧಿಸಿದ ಆಚರಣೆಗಳಿವೆ.

೧೩) ಕೊಟ್ಟಿಗೆ (ಮೂಡೆ) : ಅಕ್ಕಿ ಮತ್ತು ಉದ್ದಿನಿಂದ ತಯಾರಿಸಿದ (ಇಡ್ಲಿಗೆ ಉಪಯೋಗಿಸುವಂತಹದ್ದೇ) ಹಿಟ್ಟನ್ನು ಬಾಳೆ ಎಲೆ ಅಥವಾ ಹಲಸಿನ ಎಲೆಗಳ ಕೊಟ್ಟೆಗಳಲ್ಲಿ ಸುರಿದು ಆವಿಯಲ್ಲಿ ಬೇಯಿಸಿ ಮಾಡಿದ ತಿನಿಸು: ಕಡುಬು.

೧೪) ಕೋರಿ ರೊಟ್ಟಿ : ಬೆಳ್ತಿಗೆ ಅಕ್ಕಿಯಿಂದ ಮಾಡಿದ ತೆಳ್ಳನೆಯ ಶುಷ್ಕ ರೊಟ್ಟಿ. ಇದಕ್ಕೆ ಪೇಪರ್ ರೊಟ್ಟಿ ಎಂದೂ ಕರೆಯುತ್ತಾರೆ.

೧೫) ಗಗ್ಗರ : ಭೂತ ನರ್ತಕನ ಕಾಲಿಗೆ ಕಟ್ಟಿಕೊಳ್ಳುವ. ಒಳಗಡೆ ಗೆಜ್ಜೆಗಳಿರುವ ದೋಣಿಯಾಕಾರದ ದೊಡ್ಡ ಗಾತ್ರದ ಕಾಲುಗಡಗ. ಗಗ್ಗರದ

ಇತರೆ ವಿಧಗಳು: ಆಣ್ ಗಗ್ಗರ, ಕೊಡಂಗೆ ಗಗ್ಗರ, ಕೋಲು ಗಗ್ಗರ, ಪಲ್ಲಿ ಗಗ್ಗರ, ಪೊಣ್ಣು ಗಗ್ಗರ.

೧೬) ಚೆನ್ನು ನಲಿಕೆ : ಒಂದು ಜನಪದ ಕುಣಿತ. ಕುಂಭ, ಮೀನ ಮಾಸಗಳಲ್ಲಿ ಮೇರರು (ಜನಾಂಗ) ಮನೆಗಳಿಗೆ ಬಂದು ಈ ಕುಣಿತ ಮಾಡುತ್ತಾರೆ.

೧೭) ಚೆನ್ನೆಮಣೆ : ಇದೊಂದು ಪ್ರಸಿದ್ಧ ಜನಪದ ಆಟ. ಇದೊಂದು ಮಣೆಯಾಗಿದ್ದು, ಈ ಮಣೆಯು ಅರ್ಧ ಅಡಿ ಅಗಲ ಇದ್ದು, ಸುಮಾರು ಒಂದೂವರೆ ಅಡಿ ಉದ್ದವಿರುತ್ತದೆ. ಮಣೆಯ ಎರಡೂ ಬದಿಗಳಲ್ಲೂ ಸಾಲಾಗಿ ಏಳೇಳು ಗುಳಿಗಳಿರುತ್ತವೆ. ಪ್ರತಿಯೊಂದು ಗುಳಿಯ ಮಧ್ಯದಲ್ಲಿ ಒಂದು ಇಂಚಿನ ಅಂತರವಿರುತ್ತದೆ. ಮಣೆಯ ಎಡ ಮತ್ತು ಬಲಭಾಗದಲ್ಲಿ ಗೆದ್ದ ಕಾಯಿಗಳನ್ನು ಹಾಕಿಡಲು ಅಂಗೈ ಅಗಲದ ದೋಣಿ ಆಕಾರದ ಎರಡು ಪುಟ್ಟ ಪುಟ್ಟ ಕೋಣೆಗಳಿರುತ್ತವೆ. ಒಂದು ಗುಳಿಯಲ್ಲಿ ನಾಲ್ಕು ಕಾಯಿಗಳನ್ನು ಹಾಕಬೇಕು. ಒಂದು ಗುಳಿಯಲ್ಲಿರುವ ಕಾಯಿಗಳನ್ನು ತೆಗೆದು ಪಕ್ಕದ ಗುಳಿಯಿಂದ ಆರಂಭಿಸಿ ಪ್ರದಕ್ಷಿಣಾಕಾರದಲ್ಲಿ ಪ್ರತಿ ಮನೆಗೂ ಒಂದೊಂದು ಕಾಯಿಗಳನ್ನು ಹಾಕುತ್ತಾ ಬರಬೇಕು. ಈ ಆಟದಲ್ಲಿ ಹಲವು ಪ್ರಕಾರಗಳಿವೆ.

೧೮) ಜೀಟಿಗೆ/
ದೀಟಿಗೆ/
ದೀವಟಿಗೆ : ಪಂಜು. ತುಳುನಾಡಿನಲ್ಲಿ ಭೂತ ಕೋಲದ ಸಂದರ್ಭದಲ್ಲಿ ಹಿಡಿಯುವ ಪಂಜು. ಜೀಟಿಗೆಯಲ್ಲೂ ವಿಧಗಳಿವೆ ಕೋಲುಜೀಟಿಗೆ, ಪಂಚಜೀಟಿಗೆ ಇತ್ಯಾದಿ.

೧೯) ತಪ್ಪಂಗಾಯಿ : ಉತ್ಸವ ಜಾತ್ರೆಗಳ ಸಂದರ್ಭದಲ್ಲಿ ಮೇಲಕ್ಕೆ ಹಾರಿಸಿದ ತೆಂಗಿನ ಕಾಯಿಯನ್ನು ಹಿಡಿಯುವ, ಒಬ್ಬರ ಕೈಯಿಂದ ಒಬ್ಬರು ಕಸಿದುಕೊಳ್ಳುವ ಸ್ಪರ್ಧಾತ್ಮಕ ವಿನೋದ.

೨೦) ತಾಸೆ : ಒಂದು ಬಗೆಯ ಚರ್ಮವಾದ್ಯ: ಒಂದೇ ಬದಿಯಲ್ಲಿ ಕೋಲುಗಳಿಂದ ಬಾರಿಸುವ ಚೆಂಡೆಯಂತಹ ವಾದ್ಯ.

೨೧) ತಾಳಮದ್ದಳೆ : ಕನ್ನಡದ ಕರಾವಳಿ ಜಿಲ್ಲೆಗಳಲ್ಲಿ ಇದು ಪ್ರಸಿದ್ಧ ಕಲಾಪ್ರಕಾರ. ಯಕ್ಷಗಾನ ಬಯಲಾಟಕ್ಕೆ ಆಧಾರ ಪಠ್ಯವಾಗಿ ಬಳಸುವ 'ಪ್ರಸಂಗ' ಪಠ್ಯವನ್ನೇ ಈ ಕಲೆಗೂ ಬಳಸಲಾಗುತ್ತದೆ. ಈ ಕಲಾ ಸ್ವರೂಪದಲ್ಲಿ ವೇಷಭೂಷಣ, ಮುಖವರ್ಣಿಕೆ, ದೃಶ್ಯಾವಳಿಗಳು, ಸಿದ್ಧ ಸಂಭಾಷಣೆ ಮುಂತಾಗಿ ಯಾವುದೇ ಪರಿಕರಗಳನ್ನು ಬಳಸದೆ ಅರ್ಥಧಾರಿಗಳು ನಿತ್ಯವೇಷದಲ್ಲಿಯೇ ಕುಳಿತು ಚೆಂಡೆ –ಮೃದಂಗ ವಾದನಗಳ ಜೊತೆಗೆ ತಾಳ ಇಲ್ಲವೇ ಜಾಗಟೆಯನ್ನು ಹಿಡಿದ ಭಾಗವತರು ಹಾಡುವ ಪದ್ಯದ ಆಧಾರದ ಮೇಲೆ ಸಂಭಾಷಣೆಯನ್ನು ಹೊಸೆಯುತ್ತಾ, ಆಶುನಾಟಕವೊಂದನ್ನು ಹೆಣೆಯುತ್ತಾ ಹೋಗುತ್ತಾರೆ. ಇದುವೇ ತಾಳಮದ್ದಳೆ.

೨೨) ತೆಂಬರೆ : ಭೂತಕೋಲದ ಸಂದರ್ಭದಲ್ಲಿ ಅಥವಾ ಕೆಲವು ಜನಪದ ಕುಣಿತಗಳಲ್ಲಿ ಪಾಡ್ದನಗಳನ್ನು ಹಾಡುವಾಗ ಹಿಮ್ಮೇಳದಲ್ಲಿ ಬಾರಿಸುವ ಒಂದು ಚರ್ಮವಾದ್ಯ.

೨೩) ದೇಯಿಬೈದ್ಯದಿ : ತುಳುಜನಪದ ವೀರರಾದ ಕೋಟಿ ಚೆನ್ನಯರ ತಾಯಿ.

೨೪) ನೇಮ/ನೇಮೊ : ಭೂತಾರಾಧನೆಯ ಒಂದು ವಿಧ. ದೈವದ ವೈಭವೋಪೇತ ವಾರ್ಷಿಕ ಆರಾಧನೆ. ಇದರಲ್ಲಿ ಕೆಲವು ವಿಧಗಳನ್ನು ಕಾಣಬಹುದು, ಅವುಗಳೆಂದರೆ ಉದಾಹರಣೆ: ಓಮನೇಮ, ಕಟ್ಸ್ ನೇಮ, ದರ್ಮನೇಮ, ದೊಂಪದ ನೇಮ, ನೇಲ್ಯಾರ್ ನೇಮ, ಪೈಚಿಲ್ ನೇಮ, ಬಂಟ ನೇಮ, ಬಲಿನೇಮ, ಸಾನದ ನೇಮ ಇತ್ಯಾದಿ.

೨೫) ಪಂಜುರ್ಲಿ : ಕಾಡು ಹಂದಿಯ ಪ್ರತಿರೂಪವಾದ ಭೂತ. ತುಳುನಾಡಿನಬಹುಭಾಗದಲ್ಲಿ ಆರಾಧಿಸಲ್ಪಡುವ ದೈವ. ಈ ದೈವ ತುಳುನಾಡಿನಲ್ಲಿ ಬೇರೆ ಬೇರೆ ಹೆಸರಿನಲ್ಲಿ ಆರಾಧಿಸಲ್ಪಡುತ್ತದೆ. ಉದಾಹರಣೆ: ಅಣ್ಣಪ್ಪ ಪಂಜುರ್ಲಿ, ಒರ್ಗರ ಪಂಜುರ್ಲಿ, ಬಗ್ಗು ಪಂಜುರ್ಲಿ ಇತ್ಯಾದಿ.

೨೬) ಪುಂಡಿಪಣವು : ಹರಕೆಯ ರೂಪದಲ್ಲಿ ಒಪ್ಪಿಸುವ ಒಂದು ಹಿಡಿ ನಾಣ್ಯಗಳು.

೨೭) ಪತ್ತನಾಜೆ : ವೃಷಭ ಮಾಸದ ಹತ್ತನೇಯ ದಿನ. ಭೂತಾರಾಧನೆ ಉತ್ಸವ ಯಕ್ಷಗಾನ ಮೊದಲಾದ ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳು

ಮುಕ್ತಾಯವಾಗುವ ದಿನ. ಅನಂತರ ಮಳೆಗಾಲ ಪ್ರಾರಂಭವಾಗುವುದರಿಂದ ಈ ದಿನದ ಬಳಿಕ ಮಳೆಗಾಲದ ಕೊನೆಯವರೆಗೆ ಇಂತಹ ಕಾರ್ಯಕ್ರಮಗಳು ನಡೆಯುವುದಿಲ್ಲ.

೨೮) ಪಡ್ಡಾಯಿ : ಪಡುಭಾಗ, ಪಶ್ಚಿಮ ದಿಕ್ಕು. ಪಡ್ಡಾಯಿಗ್ ಪೋಪುನೆ. ಪಶ್ಚಿಮಕ್ಕೆ ಹೋಗುವುದು. ಕಡಲಿಗೆ ಮೀನು ಹಿಡಿಯಲಿಕ್ಕೆ ಹೋಗುವುದು.

೨೯) ಪಿಂಗಾರ : ಹಿಂಗಾರ, ಹೊಂಬಾಳೆ. ಅಡಿಕೆ, ತೆಂಗಿನ ಹೊಂಬಾಳೆ.

೩೦) ಪಿಲಿಪಂಜಿ

ಕುಣಿತ : ಹುಲಿಹಂದಿ ಕುಣಿತ; ಈ ಜನಪದ ಕುಣಿತವು ಬೆಳ್ತಂಗಡಿ ತಾಲೂಕಿನ ಪಶ್ಚಿಮ ಘಟ್ಟದ ಬುಡದಲ್ಲಿರುವ ಕೆಲವು ಗ್ರಾಮಗಳಲ್ಲಿ ಸದ್ಯ ಕಂಡುಬರುತ್ತದೆ. ಈ ಕುಣಿತವನ್ನು ಮುಗೇರ ಜನಾಂಗದವರು ನಡೆಸಿಕೊಂಡು ಬರುತ್ತಾರೆ. ಸುಗ್ಗಿ ಹುಣ್ಣಿಮೆಯ ಸಂದರ್ಭದ ಜನಪದ ಕುಣಿತವಾಗಿದೆ. ಈ ಕುಣಿತದಲ್ಲಿ ಹುಲಿ ಮತ್ತು ಹಂದಿ ಪ್ರಧಾನ ವೇಷಗಳಾಗಿದ್ದರಿಂದ ಪಿಲಿ–ಪಂಜಿ ಕುಣಿತ ಎಂಬ ಹೆಸರು ಬಂದಿದೆ. ಕುಣಿತದಲ್ಲಿ ಮುಖ್ಯವಾಗಿ ಐದು ವೇಷಗಳು ಕಂಡು ಬರುತ್ತದೆ. ಒಂದು ಹುಲಿ, ಒಂದು ಹಂದಿ, ಎರಡು ಜಿಂಕೆ ಮತ್ತು ಒಬ್ಬ ಬೇಟೆಗಾರ.

೩೧) ಪುದ್ವಾರ್/

ಪುದ್ವಾರ್ : ಹೊಸ ಅಕ್ಕಿಯ ಊಟ.

೩೨) ಪುರುಸೆರ್/

ಪುರ್ಸೆರ್ : ಒಂದು ಜನವರ್ಗ. ಒಂದು ಜನಪದ ಕುಣಿತ, ವಸಂತ ಋತುವಿನಲ್ಲಿ ಹದಿನೈದು ದಿನಗಳ ಕಾಲ ಗುಂಪಾಗಿ ಮನೆ ಮನೆಗಳಿಗೆ ಹೋಗಿ ಮಾಡುವ ಒಂದು ಬಗೆಯ ಜನಪದ ಕುಣಿತ.

೩೩) ಬದಿ : ವರದಕ್ಷಿಣೆ.

೩೪) ಬಾಲೆ ಸಾಂತು : ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬಹುಸಮುದಾಯಗಳ ಸಂಸ್ಕೃತಿಯಲ್ಲಿ ಕಂಡು ಬರುವ ಇತರೆ ಜನಪದ ಕುಣಿತಗಳಂತೆ ಇದೂ ಒಂದು. ಇದನ್ನು ನಡೆಸುವವರು ಮರಾಟಿ–ನಾಯ್ಕ ಸಮುದಾಯದವರು. ಒಂದು ಕಾಲಕ್ಕೆ ದಕ್ಷಿಣ ಕನ್ನಡ

ಜಿಲ್ಲೆಯಾದ್ಯಂತ ಇದ್ದ ಈ ಕಲೆ ಇಂದು ಸಂಪೂರ್ಣ ಕಣ್ಮರೆಯಾಗಿದೆ.

೩೫) ಬಳ್ಳ/ಬೂಲ್ಯ : ವೀಳ್ಯ. ಗಂಧ ಪ್ರಸಾದ: ಭೂತದ ಪ್ರಸಾದರೂಪದಲ್ಲಿ ಕೊಡುವ ಗಂಧ. ಹೊಂಬಾಳೆ, ಅರಸಿನಪುಡಿ ಇತ್ಯಾದಿ ಪ್ರಸಾದಗಳು. ಇನ್ನೊಂದು ಅರ್ಥದಲ್ಲಿ ಧಾರ್ಮಿಕ ಕೆಲಸಗಳನ್ನು ನಡೆಸಲು ಆಹ್ವಾನ, ಅನುಮತಿ ದ್ಯೋತಕವಾಗಿ ಕೊಡುವ ವೀಲ್ಯದೆಲೆ, ಅಡಕೆ ಮೊದಲಾದವುಗಳು. ಇವುಗಳಲ್ಲೂ ಕೆಲವು ವಿಧಗಳಿವೆ. ಉದಾಹರಣೆ: ಬಸಯೊದ ಬೂಲ್ಯ, ಕೊಡಿಇರೆ ಬೂಳ್ಯ. ನಂಬುಗೆದ ಬೂಳ್ಯ, ಪಣಿತಬೂಲ್ಯ, ಪಿರವುದ ಬೂಲ್ಯ, ಪಾಸುಬೂಳ್ಯ, ಬುಡುಬೂಲ್ಯ, ಲಡಾಯಿದ ಬೂಳ್ಯ. ಸಾಯಂತಬೂಳ್ಯ.

೩೬) ಬಾಳ್

ಬಂಡಾರ : ದೈವದ ಖಡ್ಗ, ಮುಖವಾಡ, ಮಣಿ ಹಾಗೂ ಇತರ ಪೂಜಾ ಸಾಧನಗಳು.

೩೭) ಬೊಜ್ಜ : ಬೈಗುಳ ಶಬ್ದ. ಉತ್ತರ ಕ್ರಿಯೆ ಮತ್ತು ಸಾವು

೩೮) ಭೂತಕೋಲ : ತುಳುನಾಡಿನಲ್ಲಿ ಭೂತಗಳಿಗೆ ವರ್ಷಾವಧಿ ಆರಾಧನೆಯ ಅಥವಾ ಹರಕೆಯ ರೂಪದಲ್ಲಿ ನಡೆಯುವ ವೈಭವೋಪೇತ ಉತ್ಸವದ ಆಚರಣೆ. ಮೊದಲು ಭೂತ ಪಾತ್ರಿಯ ಮೈಮೇಲೆ ಭೂತದ ಆವೇಶವಾಗಿ ಭೂತ ಹಾಗೂ ಭಕ್ತರ ನಡುವೆ ಸಂಭಾಷಣೆ ನಡೆಯುತ್ತದೆ. ಆಮೇಲೆ ಪರವ ಪಂಬದ, ನಲಿಕೆ, ಕೋಪಾಲ ಮೊದಲಾದ ವರ್ಗದ ಕಲಾವಿದರು ಭೂತಕ್ಕೆ ನಿಗದಿತವಾದ ವೇಷ ಭೂಷಣ ಮುಖವರ್ಣಿಕೆ ಶಿರೋಭೂಷಣ, ಪ್ರಭಾವಳಿಯ ರೂಪ ಮೊದಲಾದವುಗಳನ್ನು ಧರಿಸಿ ವಿವಿಧ ನರ್ತನ ಮಾಡಿ ಭೂತವನ್ನು ಮೈಮೇಲೆ ಆವಾಹಿಸಿಕೊಳ್ಳುತ್ತಾರೆ. ದೈವ ಮಾನವ ಸಂಭಾಷಣೆ ನಡೆದು ನರ್ತಕನು ಭಕ್ತರ ಶಾರೀರಿಕ, ಮಾನಸಿಕ, ಸಾಮಾಜಿಕ ಸಮಸ್ಯೆ, ಅಹವಾಲುಗಳನ್ನು ವಿಚಾರಿಸಿ ಪರಿಹಾರ ಹೇಳುತ್ತಾನೆ.

೩೯) ಮದಿಮಾಯ

ಮದಿಮ್ಮಾಲ್ : ಕನ್ಯಾಪು ಕುಣಿತವನ್ನೇ ಮದಿಮಾಯ ಮದಿಮ್ಮಾಲ್ ಕುಣಿತ ಎಂದು ಕರೆಯಲಾಗುತ್ತದೆ. ಪರವ ಜಾತಿಯವರು ಈ ಕುಣಿತವನ್ನು ಕುಣಿಯುತ್ತಾರೆ. ಅವರು ಇದನ್ನು ಮದಿಮಾಯ ಮದಿಮ್ಮಾಲ್ ಕುಣಿತ ಎಂದು ಕರೆಯುತ್ತಾರೆ. ಈ ಕುಣಿತದೊಂದಿಗೆ ಹಿಮ್ಮೇಳದಲ್ಲಿ ತೆಂಬರೆ ಬಡಿಯುತ್ತಾ ಕನ್ಯಾಪು ಹಾಡನ್ನು ಹಾಡುತ್ತಾರೆ. ಪದದ ಗತಿಗೆ ಸರಿಯಾಗಿ ಕುಣಿತ ಇರುತ್ತದೆ.

೪೦) ಮಾದಿರ : ನಲಿಕೆ ವರ್ಗದ ಹೆಂಗಸು ಮಾಡುವ ಒಂದು ಕುಣಿತ. ಮನೆ ಮನೆಗೆ ಬಂದು ತೆಂಬರೆ ಹಿಡಿದು ಮಾದಿರ ಹಾಡು ಹಾಡಿ ಕುಣಿದು ಸಂಭಾವನೆ ಪಡೆಯುತ್ತಾರೆ.

೪೧) ಮಾರಿಬಲೆ : ದೊಡ್ಡಗಾತ್ರದ ಬಲೆ.

೪೨) ಮುಗ/ಮೊಗ : ಲೋಹ ಅಥವಾ ಹಾಳೆಯಿಂದ ನಿರ್ಮಿಸಿದ ದೈವದ ಮುಖವಾಡ.

೪೩) ಮುಡಿ : ಅಕ್ಕಿ ಅಥವಾ ಭತ್ತವನ್ನು ಬೈಹುಲ್ಲಿನ ವೃತ್ತಾಕಾರದ ಕಟ್ಟಿನಲ್ಲಿ ಶೇಖರಿಸಿಟ್ಟ ಮೂಟೆ. ನಲ್ವತ್ತೆರಡು ಸೇರು (೪೨) ಅಳತೆಯ ಅಥವಾ ಸುಮಾರು ಮೂವತ್ತೊಂಬತ್ತು (೩೯) ಕಿಲೋ ತೂಕದ ಒಂದು ಮಾನ.

೪೪) ಹುಲಿವೇಷ : ನವರಾತ್ರಿಯ ಸಂದರ್ಭದಲ್ಲಿ (ಮಾರ್ಣಮಿ) ಕರಾವಳಿ ಭಾಗದಲ್ಲಿ ಹುಲಿಯ ಪಟ್ಟೆಯಂತೆ ಮೈಮೇಲೆ ಬಣ್ಣವನ್ನು ಬಳಿದುಕೊಂಡು ತಾಸೆಯ ಲಯಕ್ಕೆ ತಕ್ಕಂತೆ ಕುಣಿಯುವ ವೇಷ.

೪೫) ಸೇರಿಗಾರ : ವಾಲಗ ಊದುವವ ದೇವಾಲಯಗಳಲ್ಲಿ ವಾಲಗ ಊದುವ ಅಧಿಕಾರ ಪಡೆದ ಒಂದು ಜನವರ್ಗ.

೪೬) ಸೋಣದ

ಜೋಗಿ : ಶ್ರಾವಣ ಮಾಸದಲ್ಲಿ (ಸೋಣ) ನಲಿಕೆ ಜನಾಂಗದ ಪರುಷರು ಕುಣಿಯುವ ಕುಣಿತ ಸೋಣದ ಜೋಗಿ. ಇದರ ಹಿಂದೆ ನಾಥ ಪಂಥದ ಪ್ರಚಾರದ ಕಾರಣವಿದೆ. ಈ ಕುಣಿತ ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಸೀಮೆ ಮತ್ತು ಕಾಸರಗೋಡು ಪ್ರದೇಶದಲ್ಲಿ ಕಂಡುಬರುತ್ತದೆ.